ಸಂಪುಟ: 13 Volume | ಸಂಚಿಕೆ: 362 Issue | ಪುಟಗಳು 08 Pages | ಸೋಮವಾರ 30 ಮಾರ್ಚ್ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349


ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**
ನಾವು ಮಾಡಿದ ಅಲ್ಪ ಸಾಧನೆ, ಮಾಡಬೇಕಾದ ಬೃಹತ್ ಕಾರ್ಯಕ್ಕೆ ನಮ್ಮನ್ನು ಕುರುಡಾಗಿಸಬಾರದು.
–ಎಸ್. ರಾಧಾಕೃಷ್ಣನ್

ಕನ್ನಡ ಭುವನೇಶ್ವರಿ ಸಂಘದಿಂದ ರಾಮ ನವಮಿ 6
ಗ್ರಾಪಂ ಮಾಜಿ ಅಧ್ಯಕ್ಷನ ಹತ್ಯೆ 7
ಭಾರತದ ತುರ್ತು ಚಿಕಿತ್ಸಾ ಕ್ಷೇತ್ರಕ್ಕೆ ಚೈತನ್ಯ 8


ಗುರುಮಠಕಲ್ ಖಾಸಮಠದ ಶ್ರೀ ಮನಿಪ್ರ ಶಾಂತವೀರ ಗುರುಮುರುಘ ರಾಜೇಂದ್ರ ಮಹಾ ಸ್ವಾಮಿಗಳು ಸಂಚಿಕೆ ಕುರಿತು ಶುಭ ಹಾರೈಸಿದರು.


ಕೇರಳ ಚುನಾವಣೆ ಪ್ರಚಾರದಲ್ಲಿರುವ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ವಯನಾಡ್ ನ ಕಲ್ಪೆಟ್ಟ ವಿಧಾನ ಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದಿಕ್ ಪರ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

## ಜೈಲಿನಲ್ಲಿ ಐಷಾರಾಮಿ ಜೀವನ, ವಿಡಿಯೊ

**ಬೆಂಗಳೂರು:** ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಮತ್ತೊಮ್ಮೆ ಸುದ್ದಿಯಲ್ಲಿದೆ. ಜೈಲಿನ ಒಳಗಡೆ ಮೊಬೈಲ್, ಟಿವಿ ಹಾಗೂ ಐಷಾರಾಮಿ ಸೌಲಭ್ಯಗಳಿವೆ ಎಂದು ಬಿಂಬಿಸುವ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ. ವೈರಲ್ ಆಗಿರುವ ವೀಡಿಯೋದಲ್ಲಿ ಜೈಲಿನಲ್ಲಿರುವ ಕೆಲ ವಿಚಾರಣಾಧೀನ ಕೈದಿಗಳು ವಿಡಿಯೋ ಚಿತ್ರೀಕರಿಸುತ್ತಿರುವುದು ಕಂಡು ಬಂದಿದ್ದು, "ನಾಳೆ ಐಪಿಎಲ್ ಪಂದ್ಯವಿದೆ, ಈ ಸಲ ಕಪ್ ನಮ್ದೇ" ಎಂದು ಹೇಳುವುದರ ಜೊತೆಗೆ, ಜೈಲಿನೊಳಗೆ ಮೊಬೈಲ್, ಟಿವಿ ಹಾಗೂ ನೆಟ್ಫ್ಲಿಕ್ಸ್ ಸೌಲಭ್ಯಗಳಿವೆ ಎಂದು ಹೇಳಿರುವುದೂ ಕಂಡು ಬಂದಿದೆ. ಅಲ್ಲದೇ ಈ ಮೊಬೈಲ್ ಫೋನ್ನು ಹಿರಿಯ ಐಪಿಎಸ್ ಅಧಿಕಾರಿಯೇ ತಂದುಕೊಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ.

## ನೆಲದ ಕಾರ್ಯಾಚರಣೆ ಶುರು..?

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಇರಾನ್ ಅಮೆರಿಕ ಯುದ್ಧವು ಐದನೇ ವಾರಕ್ಕೆ ವಿಸ್ತರಿಸಿದೆ. ಈ ನಡುವೆ ಹಾರ್ಮುಜ್ ಜಲಸಂಧಿ ವಶಕ್ಕೆ ಪಡೆಯಲು ಅಮೆರಿಕ ತನ್ನ ಸೇನೆಯನ್ನು ಕಣಕ್ಕಿಳಿಸಿದೆ ಎಂಬ ಸುದ್ದಿಗಳು ವ್ಯಾಪಕ ವೈರಲ್ ಆಗುತ್ತಿವೆ. ಖಾರ್ಗ್ ದ್ವೀಪ ಮತ್ತು ಹಾರ್ಮುಜ್ ಜಲಸಂಧಿಯ ಬಳಿಯ ಕರಾವಳಿ ಸ್ಥಳಗಳ ಮೇಲಿನ ಸೇನಾ ದಾಳಿಗಳು ಸೇರಿದಂತೆ ಇರಾನ್ನಲ್ಲಿ ವಾರಗಳ ಕಾಲ ನೆಲದ ಕಾರ್ಯಾಚರಣೆಗಳಿಗೆ ಪೆಂಟಗನ್ ಸಿದ್ಧತೆ ನಡೆಸುತ್ತಿದೆ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.



## ವಿರಾಟ್ ಕೊಹ್ಲಿ ಅಪ್ರಮತಿಮ ಆಟಗಾರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಟೆಸ್ಟ್–ಟಿ20 ಸ್ವರೂಪಗಳಿಂದ ನಿವೃತ್ತರಾಗಿದ್ದರೂ ವಿರಾಟ್ ಕೊಹ್ಲಿ ತಮ್ಮ ಅಪ್ರತಿಮ ಶಕ್ತಿ ಹಾಗೂ ತೀವ್ರತೆಯಿಂದ ಈಗಲೂ ಮಾತನಾಡುವುದನ್ನು' ಮುಂದುವರೆಸಿದ್ದಾರೆ ಎಂದು ಮಾಜಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಹೇಳಿದ್ದಾರೆ.

ಕಳೆದ ವರ್ಷದ ಜೂನ್ 3 ರಂದು ನಡೆದ ಐಪಿಎಲ್ ಫೈನಲ್ ಪಂದ್ಯದ ಬಳಿಕ ಮೊದಲ ಬಾರಿಗೆ ಟಿ20 ಕ್ರಿಕೆಟ್‌ಗೆ ಮರಳಿದ್ದ ಕೊಹ್ಲಿ, ಐಪಿಎಲ್‌ನಲ್ಲಿ ತಮ್ಮ 28ನೇ ಅರ್ಧಶತಕವನ್ನು ಬಾರಿಸುವ ಮೂಲಕ 2026ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸನ್‌ರೈಸರ್ಸ್ ಹೈದರಾಬಾದ್




ವಿರುದ್ಧ ಆರು ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ವಿರಾಟ್ ಕೊಹ್ಲಿ ಅತ್ಯುತ್ತಮ ಕ್ರಿಕೆಟ್ ಆಡುತ್ತಿದ್ದಾರೆ. ಆಟವನ್ನು ಪೂರ್ಣ ಪ್ರಯತ್ನ, ಕೌಶಲ್ಯ ಮತ್ತು ತೀವ್ರತೆಯಿಂದ ಹೇಗೆ ಆಡಬೇಕು ಎಂಬುದನ್ನು ತೋರಿಸುತ್ತಿದ್ದಾರೆ. ಇದು ಇತರರಿಗೆ ಮಾದರಿಯಾಗುವಂತೆ ಇತ್ತು. ಇದು ನನ್ನನ್ನು ಪ್ರಭಾವಿತಗೊಳಿಸಿತು' ಎಂದಿದ್ದಾರೆ ಅಶ್ವಿನ್.

## ಬಸವಣ್ಣನ ಸಮಾನತೆ ಮಾದರಿ

• ಮಲ್ಲಮ್ಮ ನುಡಿ ವಾರ್ತೆ ಔರಾದ್

ತಾಲೂಕಿನ ಲಾಧಾ ಗ್ರಾಮದಲ್ಲಿ ವಿಶ್ವಗುರು ಬಸವಣ್ಣನವರ ಮೂರ್ತಿ ಹಾಗೂ ಐಕ್ಯ ಮಂಟಪ ಅನಾವರಣ ಕಾರ್ಯಕ್ರಮ ಇಂದು ಭಕ್ತಿಭಾವಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಸಂಸದ ಸಾಗರ ಖಂಡ್ರೆ ಭಾಗವಹಿಸಿ ಐಕ್ಯ ಮಂಟಪವನ್ನು ಅನಾವರಣಗೊಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿ, ಬಸವಣ್ಣನವರು ಸಾರಿದ ಸಮಾನತೆ, ಸಹೋದರತ್ವ, ಶ್ರಮಕ್ಕೆ ಮಾನ್ಯತೆ ಎಂಬ ಮೌಲ್ಯಗಳು ಇಂದಿನ ಸಮಾಜಕ್ಕೆ ಮಾರ್ಗದರ್ಶಕವಾಗಿವೆ. ಬಸವ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾನತೆಯ ಸಮಾಜ ನಿರ್ಮಾಣಕ್ಕೆ



ಕೈಜೋಡಿಸಬೇಕು ಎಂದು ಕರೆ ನೀಡಿದ್ದಾರೆ. ನಾಡೋಜ ಡಾ. ಬಸವಲಿಂಗ ಪಟ್ಟದೇವರು, ಪೂಜ್ಯ ನಿಜಗುಣಾನಂದ ಮಹಾಸ್ವಾಮೀಜಿಗಳು, ಪೂಜ್ಯ ಶಿವಾನಂದ ಶ್ರೀಗಳು (ಹುಲಸೂರು), ಸ್ಥಳೀಯ ಶಾಸಕರಾದ ಶ್ರೀ ಪ್ರಭು ಚವ್ಹಾಣ್ ಸೇರಿದಂತೆ ಕಾರ್ಯಕ್ರಮದ ಸಮಿತಿ ಸದಸ್ಯರು, ಬಸವ ಭಕ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಎಕ್ಸಿಟ್ ಪೋಲ್ ನಿಷೇಧ

### ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭೆ ಬೈ ಎಲೆಕ್ಷನ್ ಚುನಾವಣೋತ್ತರ ಸಮೀಕ್ಷೆ ಬೇಡ: ಆಯೋಗ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪ್ರಯುಕ್ತ ಮತದಾನದ ಪ್ರಕ್ರಿಯೆ ಮುಗಿಯುವವರೆಗೆ ಎಕ್ಸಿಟ್ ಪೋಲ್ (ಚುನಾವಣೋತ್ತರ ಸಮೀಕ್ಷೆ) ನಡೆಸಬಾರದು ಎಂದು ಭಾರತೀಯ ಚುನಾವಣಾ ಆಯೋಗವು ಕಟ್ಟುನಿಟ್ಟಾಗಿ ನಿಷೇಧಿಸಿದೆ. ಏಪ್ರಿಲ್ 9ರ ಬೆಳಗ್ಗೆ 7:00 ಗಂಟೆಯಿಂದ ಏ. 29ರ ಸಂಜೆ 6:30 ರವರೆಗೆ ಈ ನಿಷೇಧ ಜಾರಿಯಲ್ಲಿರುತ್ತದೆ. ಫಲಿತಾಂಶಗಳ ಪ್ರಕಟಿಸಬಾರದು ಎಂದು ರಾಜ್ಯ ಚುನಾವಣಾಧಿಕಾರಿ ಕಚೇರಿ ಸ್ಪಷ್ಟಪಡಿಸಿದೆ.

**ಆಯೋಗ ಆದೇಶ:** ರ್ನಾಟಕ ಮುಖ್ಯ ಚುನಾವಣಾಧಿಕಾರಿ, ಈ ಆದೇಶವನ್ನು ಮಾ.27ರಂದು ಹೊರಡಿಸಿದ್ದಾರೆ. ಇದೀಗ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಈ ಬಗ್ಗೆ ಅಧಿಸೂಚನೆ ರಾಜ್ಯ ಗಜೆಟ್‌ನಲ್ಲಿ ಪ್ರಕಟಗೊಂಡಿದೆ. ಆರು ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆ ಕುರಿತು ಚುನಾವಣೋತ್ತರ ಸಮೀಕ್ಷೆಗಳಿಗೆ ತಾತ್ಕಾಲಿಕ ನಿಷೇಧ ಹೇರಲಾಗಿದೆ.

**ಕಾನೂನು ಬಾಹಿರ ಕ್ರಮ:** ಜನಪ್ರತಿನಿಧಿಗಳ ಕಾಯ್ದೆ 1951ರ ಸೆಕ್ಷನ್ 126೦ ಪ್ರಕಾರ, ಚುನಾವಣಾ ಅವಧಿಯಲ್ಲಿ ಯಾವುದೇ ವ್ಯಕ್ತಿ ಚುನಾವಣೋತ್ತರ ಸಮೀಕ್ಷೆ ನಡೆಸುವುದು ಅಥವಾ ಅದರ ಫಲಿತಾಂಶವನ್ನು ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ ಅಥವಾ ಇತರೆ ಯಾವುದೇ ರೂಪದಲ್ಲಿ ಪ್ರಕಟಿಸುವುದು ಕಾನೂನುಬಾಹಿರವಾಗಿದೆ.



### ಆಪ್ತನ ಗೆಲುವಿಗೆ ಸಿಎಂ ಆಸಕ್ತಿ

ದಾವಣಗೆರೆಗಿಂತ ಬಾಗಲಕೋಟೆ ಕ್ಷೇತ್ರದಲ್ಲಿರುವ ಆಪ್ತ ಮಗನ ಗೆಲುವಿಗಾಗಿ ಸಿಎಂ ಸಿದ್ದರಾಮಯ್ಯ ದೃಷ್ಟಿ ಹರಿಸಿದ್ದಾರೆ. ಪ್ರಚಾರ ಪಟ್ಟಿಯಲ್ಲಿ ಹೆಚ್ಚು ದಿನ ಮೀಸಲಿಟ್ಟಿರುವುದು ಇದಕ್ಕೆ ಸಾಕ್ಷಿ. ಶಾಸಕರಾಗಿದ್ದ ದಿ. ಎಚ್.ವೈ. ಮೇಟಿ ಸಿಎಂ ಅವರ ಪರಮಾಪ್ತ, ಸಿದ್ದರಾಮಯ್ಯ ಸೂಚನೆ ಮೇರೆಗೆ ಬಾಗಲಕೋಟೆ ಕ್ಷೇತ್ರದ ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಮೇಟಿ ಸಚಿವ ಸ್ಥಾನಕ್ಕೂ ರಾಜೀನಾಮೆ ನೀಡಿದ್ದರು. ಜೆಡಿಎಸ್ ಹೊರ ಹಾಕಿದಾಗ ಸಿಎಂ ಜತೆ ಕಾಂಗ್ರೆಸ್ ಸೇರಿದ್ದರು.

### ಕಾಂಗ್ರೆಸ್‌ಗೆ ಬಿಜೆಪಿ ಪೈಪೋಟಿ

ಅಂದು ಇಂದು ಬಿಜೆಪಿ ಭದ್ರಕೋಟೆಯಾಗಿರುವ ಬಾಗಲಕೋಟೆಯಲ್ಲಿ ಕಾಂಗ್ರೆಸ್‌ಗೆ ಅನುಕಂಪ ಇದ್ದರೂ ಗೆಲುವು ಸುಲಭವಲ್ಲ ಎಂಬ ಕಾರಣಕ್ಕೆ ಖುದ್ದು ಸಿದ್ದರಾಮಯ್ಯ ಅಖಾಡಕ್ಕೆ ಇಳಿದಿದ್ದಾರೆ. ಅಹಿಂದ ಮತಗಳನ್ನು ಒಗ್ಗೂಡಿಸುವುದು ರಣತಂತ್ರ. ಈ ಹಿನ್ನೆಲೆಯಲ್ಲಿ ಸಿಎಂ ಪ್ರಚಾರ ನಡೆಸಿ ಮುಖಂಡರು, ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬಲಿದ್ದಾರೆ. ಗೆಲುವಿನ ಮೂಲಕ ಶಿಷ್ಯನ ಋಣ ತೀರಿಸುವ ಇರಾದೆಯಲ್ಲಿದ್ದಾರೆ. ಆದರೆ ಮತದಾರನ ಆಂತರ್ಯ ಅರ್ಥವಾಗದಾಗಿದೆ.

### ಇತ್ತ ಸುಳಿಯದ ಜಮೀರ್..!

ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರ ಈಗ ಸಾಕ್ಷಾತ್ ಪ್ರತಿಷ್ಠೆಯ ಕಣವಾಗಿದೆ. ಮುಸ್ಲಿಂ ಬಾಂಧವರ ಪ್ರಾಬಲ್ಯ ಇರುವ ಈ ಕ್ಷೇತ್ರದಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಹೆಸರು ನಡೆಯುತ್ತದೆ. ಸಾದಿಕ್ ಪೈಲ್ವಾನ್ ಕೂಡ ಅವರ ಅಣತಿಯಂತೆ ಕಣಕ್ಕಿಳಿಯಲಿದ್ದಾರೆ ಮುಂತಾದ ಅಭಿಪ್ರಾಯಗಳಿದ್ದರೂ, ಮಲ್ಲಿಕಾರ್ಜುನ್ ಅವರು ಒಮ್ಮೆ ಜಮೀರ್ ಅವರನ್ನು ಗದುರಿದ್ದಕ್ಕೆ ಮುನಿದ ಸಚಿವ ಇದುವರೆಗೂ ಕ್ಷೇತ್ರದ ಕಡೆ ಕಣ್ಣುಕೂಡ ಹಾಕಿಲ್ಲ..!

### ಹಿಜಾಬ್ ವಿರೋಧಿಸಿದ್ದು..?

ಅಲ್ಪಸಂಖ್ಯಾತರ ಪ್ರಾರ್ಥನೆಯನ್ನು ವಿರೋಧಿಸಿದವರು ಯಾರು..? ಹಿಜಾಬ್ ಅನ್ನು ಯಾರು ವಿರೋಧಿಸಿದರು..? ಅಲ್ಪಸಂಖ್ಯಾತ ಅಂಗಡಿಯವರಿಂದ ಸರಕುಗಳನ್ನು ಖರೀದಿಸುವುದನ್ನು ಜನರು ನಿರುತ್ಸಾಹಗೊಳಿಸಿದವರು? ಈ ಎಲ್ಲಾ ಕಾರಣಗಳನ್ನು ಗಮನಿಸಿ, ಚುನಾವಣೆಯಲ್ಲಿ ಜವಾಬ್ದಾರಿಯುತವಾಗಿ ಮತ ಚಲಾಯಿಸಿ ಎಂದು ಅಲ್ಪಸಂಖ್ಯಾತರಿಗೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಶನಿವಾರ ಕರೆ ನೀಡಿದ್ದು ಚರ್ಚೆಗೆ ಗ್ರಾಸವಾಗಿದೆ.

## ಬದಲಾವಣೆ ಬಯಸಿದ ಕ್ಷೇತ್ರದ ಜನ

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಮತದಾರರು ಈ ಬಾರಿ ಬದಲಾವಣೆ ಬಯಸಿದ್ದು, ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರನ್ನು ಗೆಲ್ಲಿಸಲಿದ್ದಾರೆ. ಇಷ್ಟು ವರ್ಷಗಳ ಕಾಲ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದರೂ ಯಾವುದೇ ಅಭಿವೃದ್ಧಿಯಾಗಿಲ್ಲ. ಇದರಿಂದ ಮತದಾರರು ಬೇಸತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.



ಉಪಚುನಾವಣೆ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ರಾಜ್ಯದ ರಾಜಕಾರಣದ ದಿಕ್ಕನ್ನು ಬದಲಿಸುವ ಒಂದು ಪ್ರಮುಖ ಶಕ್ತಿಯಾಗಲಿದೆ ಎಂದಿದ್ದಾರೆ.

ಇಷ್ಟು ವರ್ಷಗಳ ಕಾಲ ಸುದೀರ್ಘವಾಗಿ ಕ್ಷೇತ್ರ ಕಾಂಗ್ರೆಸ್ನ ಹಿಡಿತದಲ್ಲಿ ಇದ್ದರೂ ಇಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ. ಈ ಬಾರಿಯಾದರೂ ನಾವು ಬದಲಾವಣೆ ಮಾಡಬೇಕು ಎಂದು ಬಯಸಿದ್ದಾರೆ ಎಂದಿದ್ದಾರೆ.

## ಪ್ರಚಾರಕ್ಕಾಗಿ ಟ್ಯಾಂಕರ್ ನೀರು..?

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಹುಮನಾಬಾದ್ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತಿದೆ. ಜನರು ದಿನನಿತ್ಯ ಕುಡಿಯುವ ನೀರಿಗಾಗಿ ಪರದಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು ಹುಮನಾಬಾದ್ ನಗರ ಕೆಲ ಬಡಾವಣೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿಸುತ್ತಿದ್ದು, ಅದನ್ನು ಪ್ರಚಾರದ ಸಾಧನವಾಗಿಸಿಕೊಳ್ಳುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಪಟ್ಟಣದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೆ ಬಂದರೂ ಯಾಕೆ ಸರಿಯಾಗಿ ಸರಬರಾಜು ಮಾಡಲಾಗುತ್ತಿಲ್ಲ ಎಂಬ ಪ್ರಶ್ನೆ ಜನರದಾಗಿದೆ. ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುತ್ತಿರುವುದು ಸಮಸ್ಯೆಗೆ ಪರಿಹಾರವಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಬೇಸಿಗೆ ಬಂದಾಗಲೆಲ್ಲಾ ಇದೇ ಸಮಸ್ಯೆ ಮರುಕಳಿಸುತ್ತಿರುವುದು ಆಡಳಿತದ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

## ನಾಲ್ವರು ಮಕ್ಕಳನ್ನು ಬಲಿಪಡೆದ ಹೊಂಡ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಬೇಸಿಗೆಯ ಬಿಸಿಲ ತಾಪದ ನಡುವೆ, ತಂಪು ಪಡೆಯಲು ಹೋದ ನಾಲ್ವರು ಪುಟಾಣಿ ಮಕ್ಕಳು ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿವೆ. ಈ ಘಟನೆ ಸಮೀಪದ ನಗನೂರು ಗ್ರಾಮದಲ್ಲಿ ಭಾನುವಾರ ನಡೆದಿದೆ.

### ಗ್ರಾಮದಲ್ಲಿ ಮಡುಗಟ್ಟಿದ ಶೋಕ

ಘಟನೆಯ ವಿಷಯ ತಿಳಿಯುತ್ತಿದ್ದಂತೆಯೇ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಗ್ರಾಮಸ್ಥರೆಲ್ಲರೂ ಕೃಷಿ ಹೊಂಡದ ಬಳಿ ಜಮಾಯಿಸಿದ್ದು, ನಾಲ್ಕೂ ಮಕ್ಕಳ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಕಂದಮ್ಮಗಳನ್ನು ಕಳೆದುಕೊಂಡ ಪೋಷಕರ ರೋದನ ನೋಡುವವರ ಕಣ್ಣಾಲಿಗಳನ್ನು ತೇವಗೊಳಿಸುವಂತಿತ್ತು. ಇಡೀ ನಗನೂರು ಗ್ರಾಮದಲ್ಲಿ ನೀರವ ಮೌನ ಆವರಿಸಿದ್ದು, ಶೋಕ ಸಾಗರದಲ್ಲಿ ಮುಳುಗಿದೆ.



**ಆಗಿದ್ದಾದರೂ ಏನು?:** ಗ್ರಾಮದ ಹೊರವಲಯದ ಕೃಷಿ ಹೊಂಡಕ್ಕೆ ಈಜಲು ಹೋದಾಗ ಈ ದುರಂತ ಸಂಭವಿಸಿದೆ. ಮೃತಪಟ್ಟವರೆಲ್ಲರೂ ಒಂದೇ ಕುಟುಂಬ ಸಂಬಂಧಿ 10 ವರ್ಷದೊಳಗಿನ ಮುಗ್ಧ ಮಕ್ಕಳಾಗಿವೆ. ಕಿರಣ (6), ಬಸಮ್ಮ (11), ಶರತ್ (6) ಮತ್ತು ಹಣಮೇಶ (7) ಎಂದು ಗುರುತಿಸಲಾಗಿದೆ.

### ಬಿಸಿಲ ಬೇಗೆ, ಆಳ ಅರಿಯದ ಮಕ್ಕಳು

ಭಾನುವಾರ ಬಿಸಿಲಿನ ಬೇಗೆ ತಣಿಸಿಕೊಳ್ಳಲು ಮಕ್ಕಳು ನೀರಿಗಿಳಿದಿದ್ದರು. ಆದರೆ ನೀರಿನ ಆಳ ತಿಳಿಯದೇ ಒಬ್ಬರನ್ನೊಬ್ಬರು ಉಳಿಸಲು ಹೋಗಿ ನಾಲ್ವರೂ ಜಲಸಮಾಧಿಯಾಗಿದ್ದಾರೆ ಎಂದು ತಿಳಿದುಬಂದಿದೆ. ವಿಷಯ ತಿಳಿದ ತಕ್ಷಣ ಕೆಂಭಾವಿ ಹಾಗೂ ವೈದ್ಯಕೀಯ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಹುಟ್ಟುಹಬ್ಬ ಸರಳವಾಗಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಹುಮನಾಬಾದ್ ಮತಕ್ಷೇತ್ರದ ಜನರು ವಿವಿಧ ಸಮಸ್ಯೆಗಳು ಹಾಗೂ ಸಂಕಷ್ಟಗಳನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಮಾಜಿ ಸಚಿವರಾದ ರಾಜಶೇಖರ ಬಿ. ಪಾಟೀಲ ಅವರ ಹುಟ್ಟುಹಬ್ಬವನ್ನು ಈ ಬಾರಿ ಅತ್ಯಂತ ಸರಳ ರೀತಿಯಲ್ಲಿ ಆಚರಿಸಲು ಜೇರಪೇಟ್ ಬಡಾವಣೆಯ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ನಿವಾಸಿಗಳು ತಿಳಿಸಿದ್ದಾರೆ.

ಎಪ್ರಿಲ್ 1 ರಂದು ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ ರವರು. ತಮ್ಮ ಕುಟುಂಬ ಸದಸ್ಯರೊಂದಿಗೆ ಈ ಭಾಗದ ಐತಿಹಾಸಿಕ ದೇವಸ್ಥಾನಗಳಾದ ಗ್ರಾಮ ದೇವರು ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ತೆರಳಿ ಅಲ್ಲಿ ವಿಶೇಷ ಪೂಜೆ ನೆರವೇರಿಸುವರು. ತದನಂತರ ಮಾತೆ ರಾಜರಾಜೇಶ್ವರಿ ದೇವಸ್ಥಾನಕ್ಕೆ ತೆರಳಿ ಪೂಜೆ ನೆರವೇರಿಸಿ, ಅಲ್ಲಿಂದ ಕಾರ್ಯಕರ್ತರು ಆಯೋಜಿಸಿ ಸಾರ್ವಜನಿಕ ಆಸ್ಪತ್ರೆ ಗೆ ತೆರಳಿ. ರೋಗಿಗಳಿಗೆ ಹಣ್ಣು ಹಂಪಲ ವಿತರಿಸುವರು. ತದನಂತರ ಸಾಯಂಕಾಲ 6 ಗಂಟೆಗೆ ಜೇರಪೇಟ್ ಬಡಾವಣೆಯ ನಿವಾಸಿಗಳು ಆಯೋಜಿಸಿದ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ಕ್ಷೇತ್ರದ ಜನರು ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ವೈಭವದ ಆಚರಣೆ ಸೂಕ್ತವಲ್ಲ ಎಂದು ಹೇಳಿದರು. ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಮೊದಲ ಕರ್ತವ್ಯವಾಗಿದ್ದು, ಜನರ ಸಮಸ್ಯೆಗಳ ಪರಿಹಾರಕ್ಕೆ ತಾವು ಸದಾ ಬದ್ಧರಾಗಿರುವುದಾಗಿ ಹೇಳಿದ್ದಾರೆ.
–ರಾಜಶೇಖರ ಬಿ. ಪಾಟೀಲರು
ಮಾಜಿ ಸಚಿವ

### ಕೇಕ್, ವಿಜೃಂಭಣೆ ಬೇಡ

ಸಾಮಾನ್ಯವಾಗಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭವ್ಯವಾಗಿ ಆಚರಿಸುವ ಹುಟ್ಟುಹಬ್ಬವನ್ನು, ಈ ಬಾರಿ ಯಾವುದೇ ವೈಭವವಿಲ್ಲದೆ ಸರಳವಾಗಿ ಆಚರಿಸುವಂತೆ ರಾಜಶೇಖರ ಬಿ. ಪಾಟೀಲ ಅವರು ತಮ್ಮ ಅಭಿಮಾನಿಗಳಿಗೆ ಮನವಿ ಮಾಡಿದ್ದರು. ಅವರ ಸೂಚನೆಯಂತೆ ಕಾರ್ಯಕರ್ತರು ಕೇಕ್ ಕತ್ತರಿಸುವುದು, ದೊಡ್ಡ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುವುದನ್ನು ಬಿಟ್ಟು ಸರಳವಾಗಿ ಶುಭಾಶಯಗಳನ್ನು ಮಾಡಲು ನಿರ್ಧರಿಸಿದ್ದಾರೆ.


**ಜನಮತಕ್ಕಿಂತ ದೊಡ್ಡದಾದ ಬಹುಮಾನ ಬೇರೆ ಯಾವುದೂ ಇಲ್ಲ: ಎಚ್‌ಡಿ ಕುಮಾರಸ್ವಾಮಿ, ಕೇಂದ್ರ ಸಚಿವ**



ಬಸವಕಲ್ಯಾಣ : ಇಲ್ಲಿನ ಬುಧವಾರ ಪೇಟ್ ಬಡಾವಣೆಯಲ್ಲಿ ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆ ವಿದ್ಯಾ ಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಬಸವಲಿಂಗ ಸುಬೇದಾರ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು.ಪ್ರಧಾನ ಕಾರ್ಯದರ್ಶಿಯಾದ ದತ್ತಾತ್ರೇಯ ಮುಲಗೆ ಮುಖ್ಯ ಗುರುಗಳಾದ ಐಶ್ವರ್ಯ ಹಾಗೂ ಶಿಕ್ಷಕ ವೃಂದದವರು ಮಕ್ಕಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಮಂಡಾ ಹೊಲದಲ್ಲಿ ಕೇಬಲ್ ಮಾವು ಕಳವು

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ



ಕೃಷಿ ಪಂಪ್ ಸೆಟ್ ಕೇಬಲ್‌ಗಳ ಕಳ್ಳತನ ಹೆಚ್ಚಾಗಿರುವುದು ರೈತರನ್ನು ಚಿಂತೆಗೀಡು ಮಾಡಿದೆ.ಹುಮನಾಬಾದ ಪಟ್ಟಣದ ರೈತನಾದ ತಿರುಮಲ್ ರೆಡ್ಡಿ ಮಂಡಾರವರ ಪಂಪ್ ಸೆಟ್ ಕೇಬಲ್‌ಗಳನ್ನು ಕಳ್ಳರು ಕತ್ತರಿಸಿಕೊಂಡು ಹೋಗಿದ್ದಾರೆ. ರಾತ್ರಿ ಹೊತ್ತು ಹಾಗೂ ರೈತರು ತೋಟಗಳಲ್ಲಿ ಇಲ್ಲದಿರುವ ಸಮಯ ನೋಡಿ ಕಳ್ಳರು ಮಾವಿನ ಹಣ್ಣುಗಳು ಕಳವು ಮಾಡಿಕೊಂಡು ಹೋಗಿರುವ ಘಟನೆ ಗುರುವಾರ ರಾತ್ರಿ ಸಂಭವಿಸಿದೆ. ಕೇಬಲ್ ವೈರ್ ನ್ನು ಕಳವು ಮಾಡುವಾಗ ಬಾವಿಯಿಂದ ನೀರು ಎಳೆಯುವ ಮೋಟರ್‌ನ್ನು ಬಾವಿಯಲ್ಲಿ ಬಿದ್ದು ಮುಳುಗಿದೆ.ಕೇಬಲ್ ವೈರ್ ಹಾಗೂ ಮಾವು ಕಳವು ಮಾಡಿಕೊಂಡು ಹೋಗಿದ್ದಾರೆ. ಕೇಬಲ್ ವೈರ್ ನ ಅಂದಾಜು ಮೊತ್ತ 6 ಸಾವಿರ ರೂ. ಮೌಲ್ಯದಾಗಿರುತ್ತದೆ. ಕಳುವಾದ ಕೇಬಲ್ ಮೌಲ್ಯ ಕಡಿಮೆ ಎಂಬ ಕಾರಣಕ್ಕೆ ರೈತರಾದ ತಿರುಮಲ್ ರೆಡ್ಡಿ ಮಂಡಾ ಪೊಲೀಸರಿಗೆ ದೂರು ನೀಡದೇ ಮೌಖಿಕವಾಗಿ ಮಾಹಿತಿ ನೀಡಿದ್ದಾರೆ. ಕೇಬಲ್ ಕಳ್ಳರ ಜಾಲ ಇರಬಹುದು' ಎಂದು ರೈತರು ಸಂಶಯ ವ್ಯಕ್ತಪಡಿಸಿದ್ದಾರೆ.

ಪಂಪ್ ಸೆಟ್ ಗಳ ಕೇಬಲ್ ಹಾಗೂ ವಿದ್ಯುತ್ ತಂತಿಯ ಕಳ್ಳತನದಿಂದ ಆರ್ಥಿಕ ನಷ್ಟ ಉಂಟಾಗುತ್ತಿದೆ. ಕೇಬಲ್ ಮರು ಜೋಡಣೆ ಮಾಡುವವರೆಗೆ ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗುವುದಿಲ್ಲ. ಪೊಲೀಸರು ಕಳ್ಳರನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಬೇಕು' ಎಂದು ರೈತರಾದ ತಿರುಮಲ್ ರೆಡ್ಡಿ ಮಂಡಾರವರು ಒತ್ತಾಯಿಸಿದ್ದಾರೆ.

# ಸಂತೋಷ್, ಸುವರ್ಣಾಗೆ ಸಿಎಂ ಪದಕ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಬೀದರ ಜಿಲ್ಲೆಯಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸಿದ ಇಲ್ಲಿನ ಜಿಲ್ಲಾ ಪೊಲೀಸ್ ಕಚೇರಿಯ ಜಿಲ್ಲಾ ಗುಪ್ತದಳ ವಿಭಾಗ (ಡಿಎಸ್‌ಬಿ) ಹೆಡ್ ಕಾನ್ಸಟೇಬಲ್ ಸಂತೋಷ ಮಹಾರಾಜ ಹಾಗೂ ಲೋಕಾಯುಕ್ತ ಠಾಣೆ ಕಾನ್ಸಟೇಬಲ್ ಸುವರ್ಣಾ ಸಿದ್ರಾಮ ರ–ಕ್ಷೆ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿ ಪದಕ ಒಲಿದಿದೆ.

ಪೊಲೀಸ್ ಧ್ವಜ ದಿನಾಚರಣೆ ನಿಮಿತ್ತವಾಗಿ ಪೊಲೀಸ್ ಇಲಾಖೆಯಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸುವವರಿಗೆ ಸಿಎಂ ಪದಕ ನೀಡಿ ಗೌರವಿಸಲಾಗುತ್ತದೆ.

ಈ ಸಲ ಜಿಲ್ಲೆಗೆ ಎರಡು ಮೆಡಲ್ ಬಂದಿದ್ದು ವಿಶೇಷ ಬೆಂಗಳೂರಿನಲ್ಲಿ ಏ.2ರಂದು ನಡೆಯುವ ಸಮಾರಂಭದಲ್ಲಿ ಇವರಿಗೆ ಪದಕ ಗೌರವ ಪ್ರದಾನ ಮಾಡಲಾಗುತ್ತದೆ.

ಸುವರ್ಣಾ ರಕ್ಷೆ ಅವರು ಲೋಕಾಯುಕ್ತ ಸಂಸ್ಥೆಯಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ದಾಖಲಾದ ವಿವಿಧ ಪ್ರಕರಣಗಳಲ್ಲಿ ಆಕ್ರಮ ಆಸ್ತಿ ಸಂಪಾದನೆ.ಇತರೆ ಪ್ರಕ್ರಿಯೆ ಸಂಬಂಧ ಮಾಹಿತಿ ಸಂಗ್ರಹಿಸುವಲ್ಲಿ ಸಹಾಯಕರಾಗಿದ್ದಾರೆ. ದಾಳಿಪ್ರಕರಣದಲ್ಲಿತನಿಖಾಧಿಕಾರಿಗಳಿಗೆ ಸಹಾಯಕರಾಗಿ,

ತನಿಖೆಪೂರ್ಣಗೊಳಿಸಿನ್ಯಾಯಾಲಯಕ್ಕೆ ದೋಷಾರೋಪಣೆ ಸಲ್ಲಿಸುವ ಬೆಸ್ ಕರ್ತವ್ಯ ನಿರ್ವಹಣೆಗಾಗಿ ಸಿಎಂ ಪದಕ ಪಡೆದಿದ್ದಾರೆ,

ಸುವರ್ಣಾ ಅವರು ಔರಾದ್ ತಾಲೂಕಿನ ಕೌಠಾ (ಕೆ) ನಿವಾಸಿಯಾಗಿದ್ದು,2008ರಲ್ಲಿ ಪೊಲೀಸ್ ಇಲಾಖೆ ಸೇವೆಗೆ ಸೇರಿದ್ದಾರೆ.ಮಾರ್ಕೆಟ್ ಸೇರಿ ಇತರೆ ಠಾಣೆಗಳಲ್ಲಿ ಕೆಲಸ ನಿರ್ವಹಿಸಿ ಬೀದರ್ ಲೋಕಾಯುಕ್ತದಲ್ಲಿದ್ದಾರೆ. ಇವರ ಪತಿ ಸಿದ್ರಾಮ ರಕ್ಷೆ ಸಹ ಪೊಲೀಸ್ ಇಲಾಖೆ ಡಿಎಆರ್ ವಿಭಾಗದಲ್ಲಿ ಮುಖ್ಯ ಪೇದೆ–ಯಾಗಿದ್ದಾರೆ.

ಸಂತೋಷ ಮಹಾರಾಜ ಕ್ರಿಯಾಶೀಲ ಪೇದೆಯಾಗಿದ್ದಾರೆ. ಡಿಎಸ್‌ಬಿ ಘಟಕದ ಸೇವೆ ಮೂಲಕ ಅಪರಾಧ ಚಟುವಟಿಕೆಗಳಿಗೆ ತಡೆಗಟ್ಟುವ ಜೊತೆಗೆ ವಿವಿಧ ಅಪರಾಧದ ಕಾರ್ಯಗಳು,ಸಮಾಜದಲ್ಲಿಯ ವಿವಿಧ ಚಟುವಟಿಕೆ ಮೇಲೆ ನಿಗಾ ಇರಿಸಿ ಕುರಿತು ಮೇಲಧಿಕಾರಿಗಳಿಗೆ ಸಮರ್ಪಕ ಮಾಹಿತಿ ನೀಡಿ ಸಹಾಯ ಮಾಡಿದ್ದಕ್ಕಾಗಿ ಸಿಎಂ ಪದಕ ಗೌರವಕ್ಕೆ ಭಾಜನರಾಗಿದ್ದಾರೆ.

ಬೀದರ್ ತಾಲೂಕಿನ ನವಲಾಸಪುರ ಗ್ರಾಮದ ಸಂತೋಷ ಮಹಾರಾಜ 2002ರಲ್ಲಿ ಪೊಲೀಸ್ ಇಲಾಖೆಗೆ ಸೇರಿದ್ದಾರೆ.ವಿವಿಧೆಡೆ ಇವರು ಉತ್ತಮ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ.

ಸಿಎಂ ಮೆಡಲ್ ಬಂದಿದ್ದು ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದು ಸಂತೋಷ ಹಾಗೂ ಸುವರ್ಣಾ ಸಂತಸ ಹಂಚಿಕೊಂಡಿದ್ದಾರೆ.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ಈ ರಾಜ್ಯದಲ್ಲಿ ಬಡವರಿಗೆ ನ್ಯಾಯ ಸಿಗುವುದೇ?

ರಾಜ್ಯದಲ್ಲಿ ಅಭಿವೃದ್ಧಿ,ಯೋಜನೆಗಳು,ಕಲ್ಯಾಣ ಕಾರ್ಯಕ್ರಮಗಳು ಎಂಬ ಘೋಷಣೆಗಳು ಪ್ರತಿದಿನ ಕೇಳಿಸುತ್ತಿವೆ. ಆದರೆ ಈ ಎಲ್ಲಾ ಘೋಷಣೆಗಳ ನಡುವೆ ನಿಜವಾಗಿಯೂ ಬಡವರಿಗೆ ನ್ಯಾಯ ಸಿಗುತ್ತಿದೆಯೇ ಎಂಬ ಪ್ರಶ್ನೆ ಸಾಮಾನ್ಯ ಜನರ ಮನದಲ್ಲಿ ಮೂಡುತ್ತಿದೆ. ಸಮಾಜದ ಅತ್ಯಂತ ಹಿಂದುಳಿದ ವರ್ಗದವರು ಇನ್ನೂ ಸಹ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಕಚೇರಿ ಕಚೇರಿಗೆ ಅಲೆದಾಡುವ ಸ್ಥಿತಿ ಮುಂದುವರಿದಿದೆ.

ಸರ್ಕಾರ ಬಡವರಿಗಾಗಿ ಅನೇಕ ಯೋಜನೆಗಳನ್ನು ಘೋಷಿಸುತ್ತದೆ. ಮನೆ, ಕುಡಿಯುವ ನೀರು, ಉದ್ಯೋಗ, ಆರೋಗ್ಯ ಹಾಗೂ ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನೆರವು ನೀಡುವುದಾಗಿ ಹೇಳಲಾಗುತ್ತದೆ. ಆದರೆ ಈ ಯೋಜನೆಗಳು ಬಡವರ ಮನೆ ಬಾಗಿಲಿಗೆ ತಲುಪುವಲ್ಲಿ ಅನೇಕ ಅಡೆತಡೆಗಳು ಎದುರಾಗುತ್ತಿವೆ. ಕಚೇರಿಗಳಲ್ಲಿ ಕಡತಗಳು ತಿಂಗಳುಗಟ್ಟಲೆ ಬಾಕಿ ಉಳಿಯುವುದು, ಅಧಿಕಾರಿಗಳ ನಿರ್ಲಕ್ಷ್ಯ, ಮಧ್ಯವರ್ತಿಗಳ ಹಸ್ತಕ್ಷೇಪ ಇತ್ಯಾದಿ ಸಮಸ್ಯೆಗಳು ಬಡವರನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳುತ್ತಿವೆ. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ವ್ಯವಸ್ಥೆಯ ದೌರ್ಬಲ್ಯದಿಂದ ಬಡವರು ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನ್ಯಾಯಕ್ಕಾಗಿ ಕೋರ್ಟ್‌ಗಳಿಗೆ ಹೋಗುವಷ್ಟು ಆರ್ಥಿಕ ಸಾಮರ್ಥ್ಯವೂ ಬಹುತೇಕ ಬಡವರಿಗೆ ಇರುವುದಿಲ್ಲ. ಇದರಿಂದಾಗಿ ಅನ್ಯಾಯವನ್ನು ಸಹಿಸಿಕೊಳ್ಳುವುದೇ ಅವರ ಅನಿವಾರ್ಯವಾಗುತ್ತದೆ.ಸರ್ಕಾರ ಹಾಗೂ ಆಡಳಿತ ವ್ಯವಸ್ಥೆ ಬಡವರ ಪರ ನಿಲ್ಲಬೇಕಾದ ಸಮಯ ಇದು. ಕಚೇರಿಗಳಲ್ಲಿ ಪಾರದರ್ಶಕತೆ, ಅಧಿಕಾರಿಗಳ ಜವಾಬ್ದಾರಿ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆ ರೂಪುಗೊಂಡರೆ ಮಾತ್ರ ಬಡವರಿಗೆ ನ್ಯಾಯ ಸಿಗುವ ಸಾಧ್ಯತೆ ಹೆಚ್ಚುತ್ತದೆ. ಇಲ್ಲದಿದ್ದರೆ ಅಭಿವೃದ್ಧಿಯ ಹೆಸರಿನಲ್ಲಿ ಘೋಷಣೆಗಳು ಮಾತ್ರ ಉಳಿದು,ಬಡವರ ಬದುಕಿನಲ್ಲಿ ಯಾವುದೇ ಬದಲಾವಣೆ ಕಾಣಿಸದು.ಒಟ್ಟಿನಲ್ಲಿ, ರಾಜ್ಯದ ನಿಜವಾದ ಅಭಿವೃದ್ಧಿ ಅಂದರೆ ಬಡವರು ನ್ಯಾಯ ಮತ್ತು ಸೌಲಭ್ಯಗಳನ್ನು ಸುಲಭವಾಗಿ ಪಡೆಯುವಂತಹ ವ್ಯವಸ್ಥೆ ನಿರ್ಮಾಣವಾಗುವುದು. ಈ ದಿಕ್ಕಿನಲ್ಲಿ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು ಕಾಲದ ಅವಶ್ಯಕತೆಯಾಗಿದೆ.

# ಅದ್ದೂರಿ ರಾಮಲಿಂಗೇಶ್ವರ ರಥೋತ್ಸವ



• ಮಲ್ಲಮ್ಮ ನುಡಿ ವಾರ್ತೆಚಿಟಗುಪ್ಪ

ತಾಲೂಕಿನ ಸುಕ್ಷೇತ್ರ ರಾಂಪುರ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ 5 ದಿನಗಳ ಕಾಲ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಮೊದಲ ದಿನ ಭವ್ಯ ಪಲ್ಲಕ್ಕಿ ಉತ್ಸವ ಸಡಗರ ಸಂಭ್ರಮದೊಂದಿಗೆ ರಾಮಬಾಣ ಮೆರವಣಿಗೆ ಜರುಗಿ–ತು. ಶ್ರೀ ರಾಮಲಿಂಗೇಶ್ವರ ರಾಮನವಮಿ ಉತ್ಸವ ಅಂಗವಾಗಿ ಬೆಳಿಗ್ಗೆ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ, ಅಲಂಕಾರ, ಪೂಜೆ, ರಾಮದೇವರ ತೊಟ್ಟಿಲೋತ್ಸವ ಹಾಗೂ ಆರತಿ ಸೇವೆಗಳೊಂದಿಗೆ ರಾಮನ ಜಯ ಘೋಷದೊಂದಿಗೆ ನವಮಿ ಉತ್ಸವ ಆರಂಭಗೊಂಡಿತು. ವಿಶೇಷ ರುದ್ರಾಭಿಷೇಕ ಮಹಾಮಂಗಳಾರತಿ,ಸೇರಿ ನಾನಾ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಡಾ. ಸುರೇಶ್ ಮಾಶೆಟ್ಟಿ, ಸಮಸ್ತ ಟ್ರಸ್ಟ್ ಮತ್ತು ಮಂದಿರದ ಅರ್ಚಕ ಸಿದ್ದಯ್ಯ ಪೂಜಾರಿ ಇವರ ನೇತೃತ್ವದಲ್ಲಿ ಧರ್ಮಸಭೆ ಜರುಗಿತು. ಗೀಗಿ ಪದಗಳು, ನಾನಾ ಭಜನಾ ತಂಡಗಳಿಂದ ಭಜನೆ, ಸಂಗೀತ ದರ್ಬಾರ ಸೇರಿದಂತೆ ಇತರೆ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿದವು. ಜಾತ್ರಾ ಮಹೋತ್ಸವ ನಿಮಿತ್ಯ ಮಂದಿರಕ್ಕೆ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಹಾಗೂ ನಾನಾ ಹೂವುಗಳಿಂದ ಸುಂದರವಾಗಿ ಆಲಂಕರಿಸಿದ್ದು ಭಕ್ತರನ್ನು ತನ್ನತ್ತ ಆಕರ್ಷಿಸಿತು. ರಾಂಪೂರ ಗ್ರಾಮಕ್ಕೆ ನೆರೆಯ ರಾಜ್ಯದ ಆಂಧ್ರ, ತೆಲಂಗಾಣ,ಮಹಾರಾಷ್ಟ ಹಲವೆಡೆಯಿಂದ ಅಸಂಖ್ಯಾತ ಭಕ್ತಾದಿಗಳು ಮಂದಿರಕ್ಕೆ ಆಗಮಿಸಿ ರಾಮಲಿಂಗೇಶ್ವರ ದರ್ಶ ನವನ್ನು ಪಡೆದುಕೊಂಡರು. ಮಕ್ಕಳ ಆಟಿಕೆ ಸಾಮಗ್ರಿಗಳ ಅಂಗಡಿಗಳು ಹಾಗೂ ಮಕ್ಕಳಿಗಾಗಿ ವಿವಿಧ ಆಟದ ವಸ್ತುಗಳನ್ನು ಅಳವಡಿಸಲಾಗಿತ್ತು. ರಾಮಲಿಂಗೇಶ್ವರ ಜಾತ್ರಾ ಮಹೋತ್ಸವ 4 ನೇ ದಿನವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಜಯ ಘೋಷಗಳೊಂದಿಗೆ ಪುಷ್ಪ ಅಲಂಕೃತವಾಗಿರುವ ಭವ್ಯ ರಥೋತ್ಸವ ಶ್ರೀ ರಾಮಲಿಂಗೇಶ್ವರ ಮಹಾರಾಜ ಕೀ ಜಯ ಹರ ಹರ ಮಹಾದೇವ ಎಂಬ ಜಯಕಾರದೊಂದಿಗೆ ಭಕ್ತರು ರಥವನ್ನು ಎಳೆದರು. ಐದನೇ ದಿನವು ಜಾತ್ರೆಯ ಜಂಗಿ ಕುಸ್ತಿಗಳು ನಡೆದವು ವಿಜೇತರಾದವರಿಗೆ ಬೆಳ್ಳಿ ಖಡಗ ವಿತರಸಲಾಯಿತು.ನಂತರ ಪ್ರಸಾದ ವಿತರಣೆ. ದಾಸೋಹ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷ ಡಾ.ಸುರೇಶ ಮಾಶೆಟ್ಟಿ, ಉಪಾಧ್ಯಕ್ಷ ಅಪ್ಪರಾವ, ಕಾರ್ಯದರ್ಶಿ ಶಾಮರಾವ, ಖಜಾಂಚಿ ಮಡೆಪ್ಪಾ ಪಾಟೀಲ,ಜಗದೀಶ ಮೂಲಗಿ, ದಯಾನಂದ ಪಾಟೀಲ,ಆನಂದ ಪಾಟೀಲ, ಮಧು ಪಾಟೀಲ,ಸಿದ್ಧಯ್ಯ ಪೂಜಾರಿ, ಚಂದ್ರಕಾಂತ ಮಾಲಿ ಪಾಟೀಲ, ಬಸವರಾಜ್ ಜೋಳದಾಪಕ, ವೀರಶೆಟ್ಟಿ ಪಾಟೀಲ, ಶ್ರೀಧರ ಮಾಲಿ ಪಾಟೀಲ ವಿಶ್ವನಾಥ ಬೋರಾಳೆ ಅನೇಕ ಗಣ್ಯರು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

# ರೈತರಿಗೆ ಧೈರ್ಯ ತುಂಬಿ ಆರ್ಥಿಕ ಧನ ಸಹಾಯ ಮಾಡಿದ ಪಾಟೀಲ್



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ತಾಲೂಕಿನ ಕುಡಗುಂಟಿ ಗ್ರಾಮದ ರೈತ ಗವಿಸಿದ್ದಪ್ಪ ಗೆದಗೇರಿ ಅವರಿಗೆ ಸೇರಿದ ಮೇವಿನ ಬಣವೆಗೆ ಆಕಸ್ಮಿಕ ಬೆಂಕಿ ಬಿದ್ದ ಹಿನ್ನಲೆಯಲ್ಲಿ ಮೇವು ಭಸ್ಮವಾಗಿ ಹೋಗಿದೆ ,

ಇದರಿಂದ ಕಂಗಲಾದ ರೈತನ ಸಮಸ್ಯೆಯನ್ನು ಆಲಿಸಿದ ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಅರವಿಂದಗೌಡ ಪಾಟೀಲ್ ಅವರು ರೈತನ ಮನೆಗೆ ಭೇಟಿ ನೀಡಿ ಆರ್ಥಿಕ ಸಹಾಯ ನೀಡಿ,ರೈತರು ಎದೆಗುಂದಬಾರದು ಧೈರ್ಯದಿಂದ ಬದುಕು ಸಾಗಿಸಿದಾಗ ಬದುಕುವದಕ್ಕೆ ಸಾಧ್ಯವಾಗುತ್ತದೆ ಎಂದು ಮಾತನಾಡಿದರು.

ಈ ವೇಳೆ ಗ್ರಾಮದ ಮುಖಂಡರಾದ ವಿರೇಶ ಮ್ಯಾಗಳಮಠ, ಗ್ರಾಮದ ದಳಪತಿ ಶಂಕರಗೌಡ ಪಾಟೀಲ್, ಶಂಕ್ರಪ್ಪ ಹರಿಜನ ಮಾಜಿ.ಗ್ರಾ.ಪಂ.ಸದಸ್ಯ ಶರಣಪ್ಪ ಹಾದಿಮನಿ,

ದೇವಪ್ಪ ಗುರಿಕಾರ,ಸಣ್ಣೀರಪ್ಪ ಹಾದಿಮನಿ,ಶಿವ ಬಸಪ್ಪ ಸಣ್ಣಖರಡದ,ಶರಣಪ್ಪ ತಳವಾರ,,ಭರಮಪ್ಪ ಗುರಿಕಾರ,ಮುತ್ತಪ್ಪ ತಳವಾರ,

ಹಿರೇಹನಮಪ್ಪ ಬೊಮ್ಮನಾಳ ಸೇರಿದಂತೆ ಗ್ರಾಮದ ಯುವಕರು ಉಪಸ್ಥಿತರಿದ್ದರು.

# ಆಮೆ ಗತಿಯಲ್ಲಿ ಸಾಗಿದ ಕಾಮಗಾರಿ: ಶರಣಬಸಪ್ಪ

• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ



ಪಟ್ಟಣದ 7 ನೇ ವಾರ್ಡಗಳಲ್ಲಿ ಅಮೃತ 2.0 , ಕುಡಿಯುವ ನೀರಿನ ಯೋಜನೆ ಆಮೆಗತಿಯಲ್ಲಿ ಸಾಗಿದೆ, ಕುಡಿಯುವ ನೀರಿಗಾಗಿ ಕಾಮಗಾರಿ ಪ್ರಾರಂವಾಗಿದೆ , ಆದರೆ ಪೈಪುಗಳ ಜೋಡನೆಗಾಗಿ ಅಗೆದು ತಗೆದಿರುವ ರಸ್ತೆಯನ್ನು ಸರಿಯಾಗಿ ಮುಚ್ಚಲಾರದೆ ಇರುವದರಿಂದ ,ವಾರ್ಡನಲ್ಲಿರುವ ರಸ್ತೆಗಳು ತಗ್ಗು ಗುಂಡಿಗಳಾಗಿ ನೀರು ನಿಂತು ರಸ್ತೆಗಬ್ಬು ನಾರುತ್ತಿವೆ ಮತ್ತು ಈ ಮೊದಲು ರಸ್ತೆ ಮೇಲೆ ಪೆವರ್ಸಗಳನ್ನು ಹಾಕಿ ಉತ್ತಮ ರಸ್ತೆ ಮಾಡಲಾಗಿತ್ತು ಈಗ ಪೈಪುಗಳನ್ನು ಜೋಡಿಸಿ ಮುಚ್ಚಿರುವದರಿಂದ , ಸಮತಟ್ಟವಾದ ರಸ್ತೆಗಳು ಕಿತ್ತು ಹೋಗಿವೆ ಎಂದು ಪಟ್ಟಣ ಪಂಚಾಯತಿ ಮಾಜಿ ಸದಸ್ಯ ಅಶೋಕ ಎಂ.ಅರಕೇರಿ ಅವರು ಸರಿಪಡಿಸಲು ಅಗ್ರಹಿಸಿದ್ದಾರೆ, ಇದರಿಂದ ವಯೋವೃದ್ದರು, ಚಿಕ್ಕಮಕ್ಕಳು,ಹಾಗು ರೈತಾಪಿ ಜನ ಜಾನುವಾರುಗಳಿಗೆ ತೊಂದ–ರೆಯಾಗುತ್ತದೆ ಮತ್ತು ರಾತ್ರಿ ಸಮಯದಲ್ಲಿ ಕರೆಂಟ ಹೋದಾಗ ಬಿದ್ದು ಎದ್ದಿರುವ ಪ್ರಸಂಗಗಳು ಜರುಗಿವೆ, ಸಂಬಂಧಿಸಿದ ದವರು ಸರಿಪಡಿಸಲು ಅವರು ಒತ್ತಾಯಿಸಿದ್ದಾರೆ.

# ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ಇರಲಿ: ಹಳ್ಳದ್



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಶಿಕ್ಷಕರು ಗುಣಮಟ್ಟದ ಶಿಕ್ಷಣ–ಕ್ಕೆ ಆದ್ಯತೆ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಅಭಿಪ್ರಾಯಪಟ್ಟರು. ಪಟ್ಟಣದ ರೈತ ಸಮುದಾಯ ಭವನದಲ್ಲಿ,ನಿರ್ಮಲಾ ಹಲಮಂಡಗೆ ಕ್ರಿಯೇಟಿವ್ ಸ್ಟಡೀಜ್ ಪ್ರೌಢಶಾಲೆಯ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಂದು ಮಕ್ಕಳಲ್ಲಿ ತನ್ನದೇ ಆದ ಪ್ರತಿಭೆ ಇರುತ್ತದೆ, ಆ ಪ್ರತಿಭೆಯನ್ನು ಹೊರತರುವ ಕಾರ್ಯ ಶಿಕ್ಷಕರದ್ದಾಗಿದೆ. ಶಿಕ್ಷಕರು ಮಕ್ಕಳಲ್ಲಿನ ಪ್ರತಿಭೆಯನ್ನು ಗುರುತಿಸಿ ಪಾಠಮಾಡಬೇಕು. ಸಂಸ್ಕಾರಯುತ ಗುಣಮಟ್ಟದ ಶಿಕ್ಷಣ ನೀಡುವುದರೊಂದಿಗೆ ಮಕ್ಕಳಿಗೆ ಉತ್ತಮ ದಾರಿಯಲ್ಲಿ ನಡೆಸುವ ಕಾರ್ಯಮಾಡಬೇಕು ಎಂದು ಸಲಹೆ ನೀಡಿದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ಹಲಮಂಡಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಅಮರ ಹಲಮಂಡಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕಿ ಮೀನಾಕ್ಷಿ ಪಾಟೀಲ ಶಾಲಾ ವಾರ್ಷಿಕ ವರದಿ ಮಂಡಿಸಿದರು. ಇದೇವೇಳೆ ತಂದೆ,ತಾಯಿ,ಪಾಲಕರ ಪಾದಪೂಜೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಮುಖರಾದ ಮುಸ್ತಾಕ ಪಟೇಲ, ಕಸಾಪ ತಾಲೂಕು ಅಧ್ಯಕ್ಷ ನಾಗಭೂಷಣ ಮಾಮಡಿ, ನಿವೃತ್ತ ಶಿಕ್ಷಕ ತಿಪ್ಪಣ್ಣ ಶಿವಪೂರೆ, ಜಾಲಿಂದರ ಮೇತ್ರೆ, ಬಸವರಾಜ ರಂಜೇರೆ,ಜಯರಾಜ ದಾಬಶೆಟ್ಟಿ,ಸಂತೊಷ ಬಿಜಿ ಪಾಟೀಲ ಉಪಸ್ಥಿತರಿದ್ದರು.

### ಸಿಬಿ ಪದವಿ ಕಾಲೇಜಿನ ಎನ್‌ಎಸ್‌ಎಸ್ ವಿಶೇಷ ಶಿಬಿರ

# ಸೇವೆ ಮಾಡುವ ಗುಣ ಪ್ರತಿಯೊಬ್ಬರಲ್ಲಿರಬೇಕು



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಸೇವೆ ಮಾಡುವ ಗುಣ ಪ್ರತಿಯೊಬ್ಬರಲ್ಲಿ ಬೆಳೆದಾಗ ಮಾತ್ರ ರಾಷ್ಟ್ರ ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ತೀವ್ರಗತಿಯಿಂದ ಅಭಿವೃದ್ಧಿಹೊಂದಲು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿಜಿ ಹಳ್ಳದ ಅಭಿಪ್ರಾಯಪಟ್ಟರು.

ತಾಲೂಕಿನ ಅಂಬೆಸಾಂಗವಿಯ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಭಾಲ್ಕಿಯ ಶ್ರೀ ಚನ್ನಬಸವೇಶ್ವರ ಪದವಿ ಮಹಾವಿದ್ಯಾಲಯದವರು ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಕಲಿಕೆಯೊಂದಿಗೆ ಶ್ರಮವಹಿಸಿ ಗ್ರಾಮೀಣ ಭಾಗದ ಜನರಲ್ಲಿ ಪರಿಸರ ಸ್ವಚ್ಚತೆ,ಆರೋಗ್ಯ,ಶಿಕ್ಷಣದ ಬಗ್ಗೆ ಜಾಗ್ರತಿ ಮೂಡಿಸುವುದು ಅಗತ್ಯ ಎಂದು ಹೇಳಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಚಾರ್ಯ ಡಾ.ಸಂತೋಷಕುಮಾರ ಎಸ್. ತಿರ್ಥೆಯವರು ,ಮಕ್ಕಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಸರ್ವತೋಮುಖ ಬೆಳವಣಿಗೆಯಾಗಲು ಸಾಧ್ಯ ಎಂದರು.ಮುಖ್ಯಗುರು ರಾಮರಾವ ಬಾನಾ ಅವರು ಆರಂಭದಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಮತ್ತು ಡಾ. ಭೀಮಣ್ಣ ಖಂಡ್ರೆಯವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿದರು. ಅಂಬೆಸಾಂಗವಿ ಗ್ರಾಮ ಪಂಚಾಯತಿಯ ಪಿ.ಡಿ.ಓ. ಗೀತಾ ಹಿಂಡಾ ಅವರು ಎನ್‌ಎಸ್‌ಎಸ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಅಶೋಕ ಬಿರಾದರ ಎನ್‌ಎಸ್‌ಎಸ್ ಪ್ರಾಮುಖ್ಯತೆ ತಿಳಿಸಿಕೊಟ್ಟರು.ಸಭೆಯಲ್ಲಿ ಡಾ.ಶ್ರೀನಿವಾಸ ಬೇಂದ್ರೆ, ಸುರೇಶ, ನಾಗನಾಥ ಕೋಟೆ, ಕು. ಸುಜಾತಾ, ಕು. ಮೇಘಾರಾಣಿ, ನಾಗಮಣಿ, ಅರುಣ ಸಿಂಧೆ,ಡಾ. ಮಿಲಿಂದ ಮುಳೆ, ಮತ್ತು ಶಾಲೆಯ ಎಲ್ಲ ಸಿಬ್ಬಂದಿ ವರ್ಗ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿ ಡಾ. ಮಂಜು ಮಾಲೇಕರ ಸ್ವಾಗತಿಸಿ ,ಪ್ರಾಸ್ತಾವಿಕ ಮಾತನಾಡಿದರು.

ಪ್ರೊ. ರಾಬರ್ಟ್ ನೆಲವಾಡೆ ನಿರೂಪಿಸಿದರು. ಡಾ.ಶಿವಕುಮಾರ ಕಾಂಬಳೆ ವಂದಿಸಿದರು.

# ಎಲ್‌ಪಿಜಿ ಕೊರತೆ ಇಲ್ಲ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್.ಪಿ.ಜಿ ಸರಬರಾಜು ಮಾಡಲಾಗುತ್ತಿದೆ ಅಲ್ಲದೇ ವಿಶೇಷವಾಗಿ ಆಟೋ ಎಲ್.ಪಿ.ಜಿ.ಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ಂಐಆಖ) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೇವಲ ಬೆಂಗಳೂರು ನಗರವೊಂದರಲ್ಲೇ 31 ಕೇಂದ್ರಗಳು ಲಭ್ಯವಿವೆ.

ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ (ಔಒಅ) ಖಔಅಐ, ಃಅಐ ಮತ್ತು ಊಕಅಐ ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ ರೂ. 77.74 ರ ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ.ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ.

ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18,000 ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆಯಿಲ್ಲದೆ ಎಲ್‌ಪಿಜಿ ಸರಬರಾಜು ಆಗುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ನಿರಂತರವಾಗಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ರಾಮನೆಂದರೆ ಸತ್ಯ ಮತ್ತು ಶಾಂತಿ : ಪಂತಜಲಿ



ಪಟ್ಟಣದ ದೇಸಾಯಿ ಓಣಿಯಲ್ಲಿರುವ ಸುಮಂಗಲಿಯರಿಂದ ಜೋಗಳ ಪದಗಳೊಂದಿಗೆ ಶ್ರೀ ರಾಮನ ತೋಟ್ಟಿಲೋತ್ಸವ ಕಾರ್ಯಕ್ರಮ ಜರುಗಿತು.

ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ರಾಮನೇಂದರೆ ಕೇವಲ ರಾಮಾಯಣಕ್ಕೆ ಮಿಸಲಾದ ಪಾತ್ರವಲ್ಲ ರಾಮನ ನಿಜವಾದ ಅರ್ಥವೇ ಸಮಾಜದಲ್ಲಿ ಶಾಂತಿ ಮತ್ತುತ್ಯಾಗಗಳ ಮಹತ್ವತಿಳಿಸುವುದು ಎಂದು ಪ್ರೊ ಪತಂಜಲಿ ವೀಣಾಕರ ಮಾತನಾಡಿದರು.

ಅವರು ಪಟ್ಟಣದ ದೇಸಾಯಿ ಓಣಿಯಲ್ಲಿರುವ ಶ್ರೀ ರಾಮೇಶ್ವರ ದೇವಸ್ಥಾನದ ರಾಮನವರಾತ್ರೋತ್ಸೋವ ಕಾರ್ಯಕ್ರಮದಲ್ಲಿ ಮಾತನಾಡಿ ಇಂದಿನ ದಿನಮಾನಗಳಲ್ಲಿ ಆದರ್ಶದ ಅರ್ಥವೇ ಬದಲಾಗಿದೆ ರಾಮ ಪದದ ಅರ್ಥ ತ್ಯಾಗ ಹುಟ್ಟಿನಿಂದಲೆ ಅದನ್ನು ಪಡೆದ ವ್ಯಕ್ತಿ ಯೌವ್ವನದಲ್ಲಿ ರಾಜ್ಯ ತ್ಯಾಗ ಕಾಡು ವಾನರೊಡನೆ ಸಂಘಟನೆ ಕಟ್ಟಿ ರಾವಣನ ಸಂಹಾರ ಇಲ್ಲಿ ರಾವಣನ ಎನ್ನುವ ಪಾತ್ರ ಮನುಷ್ಯನ ಕಾಮ ಕ್ರೋದ ಲೋಬ ಮದ ಮತ್ಸರಗಳ ಸಂಹಾರ ಎಂದು ತಿಳಿಯಬಹುದು ಇದರಿಂದ ಸರ್ವಕಾಲದಲ್ಲಿ ನೆನಪಿಸಿಕೊಳ್ಳುವಂತಹ ವ್ಯಕ್ತಿ ಶ್ರೀರಾಮ ಎಂದರು.

ವೇದಮೂರ್ತಿ ರಮೇಶಭಟ್ ಜೋಶಿ ಮಾತನಾಡಿ ರಾಮ ಎಂದರೆ ಶಕ್ತಿ ಚೈತನ್ಯ ನಿತ್ಯ ತಾರುಣ್ಯ ಆದ್ದರಿಂದ ನಿತ್ಯದಲ್ಲಿ ರಾಮನಾಮ ಜಪಿಸುವರು ಇದನ್ನು ಪಡೆಯಲು ಸಾಧ್ಯ ಎಂದರು.

ಸುಮಂಗಲಿಯರಿಂದ ಜೋಗಳ ಪದಗಳೊಂದಿಗೆ ಶ್ರೀ ರಾಮನ ತೋಟ್ಟಿಲೋತ್ಸವ ಕಾರ್ಯಕ್ರಮ ಜರುಗಿತು. ಒಂಬತ್ತು ದಿವಸಗಳ ಕಾಲ ಸಾಯಾಂಕಾಲ ಪ್ರಸಿದ್ಧ ಸಂಗೀತ ಕಲಾವಿದರಿಂದ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ನಾರಾಯಣ ಜೋಶಿ, ಮರುಳಿಧರ ಪೂಜಾರ, ಮಧಸೂದನ ಉಪಾಧ್ಯ, ವಾದಿರಾಜ ಬೇಗೂರ, ವಾದಿರಾಜ ಉಪಾಧ್ಯ, ಶ್ರೀಪಾದ ಜೋಶಿ, ರಕ್ಷೀತ ಶೇವಡೆ, ಶ್ರತಿ ಜೋಶಿ, ವರ್ಷಾ ಜೋಶಿ, ವಂದನಾ ಬೇಗೂರ, ವಾಣಿ ಉಪಾಧ್ಯ, ಲೇಖಿಕಿ ಅನುರಾಧ ಕುಲಕರ್ಣಿ, ಗೀತಾ ಇನಾಮದಾರ, ಸತೀಶ ವರ್ಕು, ಮುತಾಲಿಕ ದೇಸಾಯಿ, ಇದ್ದರು.

# ವೀರೇಂದ್ರ ಪಾಟೀಲರ ವೃತ್ತ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ

ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಕಲ್ಯಾಣ ಕರ್ನಾಟಕ ಭಾಗದ ನೀರಾವರಿ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಅವರ ಸ್ಮರಣಾರ್ಥ ವೃತ್ತ ಹಾಗೂ ಪುತ್ಥಳಿ ನಿರ್ಮಾಣಕ್ಕಾಗಿ ಪಟ್ಟಣದ ನಾರಾಯಣಪುರ ರಸ್ತೆಯ ಬಳಿಯಲ್ಲಿ ಭೂಮಿ ಪೂಜೆ ನೆರವೇರಿಸಲಾಯಿತು.



ಕಾರ್ಯಕ್ರಮದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ದಂಡಿನ್, ವೀರೇಂದ್ರ ಪಾಟೀಲರು ಬಸವ ಸಾಗರ ಪ್ರದೇಶದ ರೈತರ ಪಾಲಿಗೆ ಭಗೀರಥರಾಗಿ ಸೇವೆ ಸಲ್ಲಿಸಿದ್ದು, ಲಕ್ಷಾಂತರ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಒದಗಿಸುವಲ್ಲಿ ಮಹತ್ತರ ಪಾತ್ರವಹಿಸಿದ್ದಾರೆ ಎಂದು ಹೇಳಿದರು. ಇಂತಹ ಮಹನೀಯರ ಸ್ಮರಣಾರ್ಥ ವೃತ್ತ ನಿರ್ಮಿಸಿ ಪುತ್ಥಳಿ ಪ್ರತಿಷ್ಠಾಪಿಸುವುದು ಹೆಮ್ಮೆಯ ವಿಷಯವಾಗಿದ್ದು, ಪಟ್ಟಣದ ಎಲ್ಲರೂ ಒಗ್ಗೂಡಿ ಈ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಮುಖಂಡ ವೀರೇಶ್ ಬಿ ಚಿಂಚೋಳಿ ಮಾತನಾಡಿ, ತಾಲೂಕಿನಲ್ಲಿ ನೀರಾವರಿ ವಿಸ್ತರಣೆಗೆ ವೀರೇಂದ್ರ ಪಾಟೀಲರ ಕೊಡುಗೆ ಅಪಾರವಾಗಿದ್ದು, ಅವರ ಸೇವೆ ಸದಾ ಸ್ಮರಣೀಯವಾಗಿರುತ್ತದೆ ಎಂದು ಹೇಳಿದರು. ವೀರೇಂದ್ರ ಪಾಟೀಲರ ದೃಢ ನಾಯಕತ್ವದಿಂದ ಈ ಭಾಗದ ಜಮೀನುಗಳು ನೀರಾವರಿ ಪ್ರದೇಶಗಳಾಗಿ ರೂಪಾಂತರಗೊಂಡಿವೆ. ಅವರ ಸೇವೆಯನ್ನು ಸ್ಮರಿಸಿ ಕೃತಜ್ಞತೆ-ಯ ಸೂಚಕವಾಗಿ ವೃತ್ತ ಹಾಗೂ ಪುತ್ಥಳಿ ನಿರ್ಮಿಸಲಾಗುತ್ತಿದೆ ಎಂದು ಮುಖಂಡರು ತಿಳಿಸಿದರು. ಸಂದರ್ಭದಲ್ಲಿ ಬಸವರಾಜ ಮಲಗಲದಿನ್ನಿ, ಎಂ.ಎಸ್. ಚಂದಾ, ವೀರೇಶ್ ಬಿ ಚಿಂಚೋಳಿ, ಚಂದ್ರಶೇಖರ ದಂಡಿನ್, ಆರ್.ಎಂ. ರೇವಡಿ, ಹೊನ್ನಕೇಶವ ದೇಸಾಯಿ, ಪ.ಪಂ. ಸದಸ್ಯರಾದ ಶರಣು ದಂಡಿನ್, ಸಿದ್ರಾಮಪ್ಪ ಮುದಗಲ್ ಸೇರಿದಂತೆ ಮುರಿಗೆಣ್ಣ ದೇಸಾಯಿ, ಸಂಗನಗೌಡ ಪಾಟೀಲ್, ಬಸವರಾಜ ವೈಲಿ, ಕರಬಸಯ್ಯಸ್ವಾಮಿ, ಮಹೇಶ ಸ್ಥಾವರಮಠ, ಗುಂಡು ಅಂಗಡಿ, ಅನಿಲ ಚಂದಾ, ಆನಂದ ಬಾರಿಗಿಡ, ಶಿವಪ್ಪ ಮೇಟಿ, ಶಿವಾನಂದ ಶೇವಟಿ, ಮಂಜು ನೂಲಿನ ಹಾಗೂ ಅನೇಕ ರೈತರು, ರಾಜಕೀಯ ಮುಖಂಡರು, ಉದ್ಯಮಿಗಳು ಉಪಸ್ಥಿತರಿದ್ದರು.

# ಸಡಗರದಿಂದ ನಡೆದ ಅಳವಿ
## ಆಂಜನೇಯ ದೇವರ ವರ್ಧಂತಿ ಉತ್ಸವ



ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ

ಇಲ್ಲಿಯ ಸಮೀಪದ ಬೇಲೆಕಾನ, ತದಡಿ, ಅಶೋಕೆಯ ಶ್ರೀ ಅಳವಿ ಆಂಜನೇಯ ದೇವರ ವರ್ಧಂತಿ ಉತ್ಸವ ಸಂಭ್ರಮ ಸಡಗರದಿಂದ ನಡೆಯಿತು. ಮುಂಜಾನೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದು ಮಧ್ಯಾಹ್ನ 12 ಗಂಟೆಗೆ ಅಳವಿ ಪೂಜೆ ಆಂಜನೇಯ ದೇವರ ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನಡೆಯಿತು. ಸುಮಾರು 3 ಸಾವಿರಕ್ಕೂ ಅಧಿಕ ಭಕ್ತರು ಪಾಲ್ಗೊಂಡು ದೇವರ ದರ್ಶನ ಪಡೆದರು. ಸಂಜೆ ಶ್ರೀ ಆಂಜನೇಯ ಮೂರ್ತಿಯನ್ನು ಹೊತ್ತ ಪಲ್ಲಕ್ಕಿಯು ಬೇಲೆಕಾನ ಜಟಗ ದೇವರ ಸನ್ನಿಧಿಯಿಂದ ಆರಂಭಗೊಂಡು ನಂತರ ತದಡಿಯ ಶ್ರೀ ಅಶ್ವತ್ಥ ಗಣಪತಿ ದೇವಸ್ಥಾನದವರೆಗೆ ತೆರಳಿತು. ನಂತರ ಶ್ರೀ ಅಬ್ಬಿಜಟ್ಟಿ ದೇವರ ಸನ್ನಿಧಿಗೆ ಆಗಮಿಸಿ ಪುನಃ ತನ್ನ ಮೂಲಸ್ಥಾನಕ್ಕೆ ತೆರಳಿತು.

ಈ ಎಲ್ಲ ಧಾರ್ಮಿಕ ವಿಧಿ-ವಿಧಾನಗಳನ್ನು ವೇ.ರಾಜಗೋಪಾಲ ಅಡಿಗುರೂಜಿ ಅವರು ನೆರವೇರಿಸಿಕೊಟ್ಟರು. ಹಾಗೇ ಹಲವು ಅರ್ಚಕರು ತಮ್ಮ ಸೇವೆಯನ್ನು ಸಲ್ಲಿಸಿದರು. ಪಲ್ಲಕ್ಕಿಯ ಮೆರವಣಿಗೆಯ ಸಂದರ್ಭದಲ್ಲಿ ಗ್ರಾಮದ ನೂರಾರು ಜನರು ತೆರಳಿದರು. ಬೇಲೆಕಾನ ಗ್ರಾಮಸ್ಥರ ಪ್ರತಿ ಮನೆಯವರು ಕೂಡ ಈ ಅಡುಗೆ ಮತ್ತು ದೇವರ ಎಲ್ಲ ಕಾರ್ಯಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡರು.

# ಪೆಟ್ರೋಲ್ ಬಂಕ್ ಮಾಲೀಕರೊಂದಿಗೆ ಸಭೆ

ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ

ಇಂಧನ ಕೊರತೆಯ ಕುರಿತು ಹಬ್ಬಿರುವ ವದಂತಿಗಳನ್ನು ತಡೆಗಟ್ಟಲು ಮತ್ತು ಸಾರ್ವಜನಿಕರಲ್ಲಿನ ಆತಂಕವನ್ನು ದೂರ ಮಾಡಲು ಪೊಲೀಸ್ ಇಲಾಖೆ ವತಿಯಿಂದ ಸ್ಥಳೀಯ ಆರಕ್ಷಕ ಠಾಣೆಯಲ್ಲಿ ಪಿಎಸ್‌ಐ ವೆಂಕಟೇಶ ಮಾಡಗೇರಿ ರವರು ಪೆಟ್ರೋಲ್ ಬಂಕ್ ಮಾಲೀಕರೊಂದಿಗೆ ಸಭೆ ನಡೆಸಿದರು.



ಅಕ್ರಮವಾಗಿ ಇಂಧನ ಸಂಗ್ರಹ ಮತ್ತು ಮಾರಾಟ ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು ಪೆಟ್ರೋಲ್ ಬಂಕ್ ಮಾಲೀಕರು ಹಾಗೂ . ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದೇ ಶಾಂತ ರೀತಿಯಿಂದ ಸಹಕರಿಸಬೇಕು ಎಂದು ಪಿಎಸ್‌ಐ ವೆಂಕಟೇಶ ಮಾಡಗೇರಿ ಸೂಚನೆ ನೀಡಿದರು.

ಪೆಟ್ರೋಲ್ ಬಂಕ್ ಮಾಲೀಕರಾದ ಹೊನ್ನಪ್ಪ ಮೇಟಿ, ಬಿಜಿ ನಾಯಕ, ನೇಮಿಚಂದ, ಇರ್ಫಾನ್, ರಾಘು, ಹಾಗೂ ಪೊಲೀಸ್ ಸಿಬ್ಬಂದಿಗಳಾದ ಅನಿಲಕುಮಾರ, ಅಮರೇಶ ಎಚ್, ಕೆ ಇದ್ದರು.

# ಜೇವರ್ಗಿಯಲ್ಲಿ ಮಾಜಿ ದೇವದಾಸಿ
## ಮಹಿಳೆಯರಿಗೆ ಕಾನೂನು ಅರಿವು ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ದೇವದಾಸಿ ಪುನರ್ವಸತಿ ಯೋಜನಾ ಕಛೇರಿ ಕಲಬುರಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜೇವರ್ಗಿ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿ ಜೇವರ್ಗಿ ಇವುಗಳ ಸಂಯುಕ್ತಾಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗಾಗಿ ಮತ್ತು ಸಾಮಾನ್ಯ ಮಹಿಳೆಯರಿಗಾಗಿ ಇತ್ತೀಚೆಗೆ ಜೇವರ್ಗಿ ತಾಲೂಕು ಪಂಚಾಯತ ಕಮೀಟಿ ಹಾಲ್‌ನಲ್ಲಿ ಕಾನೂನು ಅರಿವು ಕಾರ್ಯಕ್ರಮ ಜರುಗಿತು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜೇವರ್ಗಿ ಜೆ.ಎಂ.ಎಫ್.ಸಿ ಸಹಾಯಕ ಸರಕಾರಿ ಅಭಿಯೋಜಕರಾದ ನಾಗವೇಣಿ ಧನ್ನಾ ಅವರು, ದೇವದಾಸಿ ಪದ್ಧತಿ ಇದೊಂದು ಅನಿಷ್ಠ ಪದ್ಧತಿಯಾಗಿದ್ದು, ಈ ಪದ್ಧತಿಯಿಂದ ಸಮಾಜದ ಮೇಲೆ ಕೆಟ್ಟ ದುಷ್ಪರಿಣಾಮ ಬೀರಲಿದ್ದು, ಇಂತಹ ಮೂಢನಂಬಿಕೆಯಂತಹ ಆಚರಣೆಗಳನ್ನು ಬಿಟ್ಟು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಜೇವರ್ಗಿ ನ್ಯಾಯವಾದಿ ಪರಶುರಾಮ ಬಿ.ಮುದಬಾಳ ಅವರು, ದೇವದಾಸಿ ಪದ್ಧತಿ ಇದು ಅನಿಷ್ಠ ಪದ್ಧತಿಯಾಗಿದ್ದು, ಈ ಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಸರಕಾರವು ಅನೇಕ ಯೋಜನೆಗಳನ್ನು ಹಾಕಿಕೊಂಡು ಶ್ರಮಿಸುತ್ತಿದೆ. 1982 ದೇವದಾಸಿ ಸಮರ್ಪಣಾ ನಿಷೇದ ಕಾಯ್ದೆ ಪ್ರಕಾರ ಒಂದು ಹೆಣ್ಣು ಮಕ್ಕಳಿಗೆ ಮುತ್ತು ಕಟ್ಟಿ ದೇವದಾಸಿಯನ್ನಾಗಿ ಮಾಡುವುದು ಅಪರಾಧ. ಇಂತಹ ಕೃತ್ಯಗಳನ್ನು ಎಸಗಿದವರಿಗೆ ಮತ್ತು ಭಾಗಿಯಾದವರಿಗೆ ಐದು ವರ್ಷ ಜೈಲು ಶಿಕ್ಷೆ 2000 ರಿಂದ 5000 ವರೆಗೆ ದಂಡ ವಿಧಿಸಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ನ್ಯಾಯವಾದಿಗಳಾದ ಅಮಾತೆಪ್ಪ ಮುದ್ದಾ ಮಾತನಾಡಿದರು. ಕಾರ್ಯಕ್ರಮದಲ್ಲಿ ದೇವದಾಸಿ ಪುನರ್ವಸತಿ ಯೋಜನಾ ಅನುಷ್ಠಾನಾಧಿಕಾರಿ ವಾಯ್.ಡಿ ಬಡಿಗೇರ, ಹುಣಸಿರಾಯ, ಸುನೀಲ ಬಾಗಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಸಿಬ್ಬಂದಿ ಪ್ರಕಾಶ ಉಪಸ್ಥಿತರಿದ್ದರು.



# ಸಾರ್ವಜನಿಕರಿಗೆ ಸ್ವಯಂ ಗಣತಿಯಲ್ಲಿ ಭಾಗವಹಿಸಲು ಅವಕಾಶ

ಜನಗಣತಿಯು ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ, ದೇಶದ ಸಾಮಾಜಿಕ-ಆರ್ಥಿಕ ಸ್ಥಿತಿಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು ಭಾರತದ ಮೊದಲ ಡಿಜಿಟಲ್ ಜನಗಣತಿ ಮತ್ತು 16 ನೇ ಜನಗಣತಿಯು ಏಪ್ರಿಲ್ ನಿಂದ 2 ಹಂತದಲ್ಲಿ ಆರಂಭಗೊಳ್ಳಲಿದೆ.

ಈ ಜನಗಣತಿಯ ಅಂಗವಾಗಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ-ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದು-ಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದಾಗಿದೆ.

ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16 ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ಏಪ್ರಿಲ್ 1 ರಿಂದ 15 ವರೆಗೆ ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ ನೀಡಲಾಗಿದೆ.



ಸಾರ್ವಜನಿಕರು ಸ್ವಯಂ ಗಣತಿ ವೆಬ್ ಪೋರ್ಟಲ್ se.census.gov.in ಬಳಸಿಕೊಂಡು ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಏ.1 ರಿಂದ 15 ವರೆಗೆ ಸ್ವಯಂ ಗಣತಿ ವೆಬ್ ಪೋರ್ಟಲ್ ಲಭ್ಯವಿದ್ದು, ಮೊಬೈಲ್, ಡೆಸ್ಕ ಟಾಪ್, ಲ್ಯಾಪ್ ಟಾಪ್ ಸಾಧನಗಳ ಮೂಲಕ ನಮೂದಿಸಬಹುದು. ಇದ-ರಿಂದ ಸಮಯದ ಉಳಿತಾಯ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿ ಆಗಲಿದೆ.

ಮಾಹಿತಿ ಭರ್ತಿಯ ವೇಳೆ ಕುಟುಂಬಗಳು ತಮ್ಮ ಸ್ಥಳದ ವಿವರಗಳನ್ನು (ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮ/ಪಟ್ಟಣ/ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. ಸ್ಥಳವನ್ನು ನಿಖರವಾಗಿ ಗುರುತಿಸಲು ಪಿನ್ ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆಯೂ ಇರುತ್ತದೆ.

ಸ್ವಯಂ-ಗಣತಿ (Self-Enumeration) ಪೋರ್ಟಲ್‌ನಲ್ಲಿ ಕೇಳಿರುವ ಕೇಳುವ ಪ್ರಶ್ನೆಗಳಿಗೆ ಮನೆಪಟ್ಟಿ ಕಾರ್ಯಾಚರಣೆ ಮೊಬೈಲ್ ಆಪ್ ನಲ್ಲಿರುವಂತೆಯೇ ರೂಪಿಸಲಾಗಿದ್ದು, ಕೆಲವು ಮಾಹಿತಿಗಳು ಪೂರ್ವಭರ್ತಿಯಾಗಿರಬಹುದು. ಸಾರ್ವಜನಿಕರಿಗೆ ಸಹಾಯವಾಗುವಂತೆ ಪದೇ ಪದೇ ಕೇಳುವ ಪ್ರಶ್ನೆಗಳು (FAQs) ಮತ್ತು ಮಾರ್ಗಸೂಚಿಗಳನ್ನೂ ಇದರಲ್ಲಿ ಒದಗಿಸಲಾಗಿದೆ.

ಕುಟುಂಬವು ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಅವರಿಗೆ ಒಂದು ವಿಶಿಷ್ಟ ಸ್ವಯಂ-ಗಣತಿ ಐಡಿ (Self-Enumeration ID) ನೀಡಲಾಗುತ್ತದೆ.

ಈ ಐಡಿಯನ್ನು ಎಸ್‌ಎಂಎಸ್ ಮತ್ತು ಇಮೇಲ್ ಮೂಲಕ ಕಳುಹಿಸಲಾಗುತ್ತದೆ. ಅದನ್ನು ಮನೆಗೆ ಭೇಟಿ ನೀಡುವ ಗಣ-ತಿದಾರರಿಗೆ (Enumerator) ಈ ಐಡಿಯನ್ನು ಸಾರ್ವಜನಿಕರು ಹಂಚಿಕೊಳ್ಳಬಹುದು.

ಸಾರ್ವಜನಿಕರು ತಮ್ಮ ಜನಗಣತಿ ವಿವರಗಳನ್ನು ಆನ್‌ಲೈನ್‌ನಲ್ಲಿ ವೇಗವಾಗಿ ಮತ್ತು ಸುರಕ್ಷಿತವಾಗಿ ಭರ್ತಿ ಮಾಡಬಹುದಾಗಿದ್ದು, ಏಪ್ರಿಲ್ 16 ರಿಂದ ಮೇ 15 ರ ವರೆಗಿನ ಅವಧಿಯಲ್ಲಿ ಗಣತಿ-ದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ. ಈ ವೇಳೆಯಲ್ಲಿ ನಿಮ್ಮ SE ID ಅನ್ನು Enumerator ಮನೆಗೆ ಬಂದಾಗ ಅದನ್ನು ಹಂಚಿಕೊಳ್ಳಬಹುದು.

ಒಂದುವೇಳೆ ಸಾರ್ವಜನಿಕರು ತಮ್ಮ ಸ್ವಯಂಗಣತಿ ಪೂರ್ಣಗೊಳಿಸದಿದ್ದರೆ, ಗಣತಿದಾರರು ತಮ್ಮಿಂದಲೇ ಮಾಹಿತಿಯನ್ನು ಸಂಗ್ರಹಿಸುತ್ತಾರೆ.

ಸ್ವಯಂ ಗಣತಿಯು 100% ಗೌಪ್ಯತೆಯ ಭದ್ರತೆಯನ್ನು ನೀಡಲಿದ್ದು, ಪ್ರತಿಯೊಬ್ಬರೂ ಸ್ವಯಂ ಗಣತಿಯನ್ನು ಪೂರ್ಣಗೊಳಿಸಿ, ದೇಶದ ಜವಾಬ್ದಾರಿಯುತ ನಾಗರಿಕರಾಗಬೇಕಿದೆ.

# ಶ್ರೀ ರಾಮನವಮಿ ಉತ್ಸವ, ಶೋಭಾಯಾತ್ರೆ

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ವತಿಯಿಂದ ಆಯೋಜಿಸಲಾದ ಶ್ರೀ ರಾಮ ನವಮಿ ಉತ್ಸವ ನಿಮಿತ್ಯ ಶನಿವಾರ ಶ್ರೀ ರಾಮನ ಭವ್ಯ ಮೂರ್ತಿಯ ಬೃಹತ್ ಶೋಭಾಯಾತ್ರೆ ನಡೆಯಿತು. ಶೋಭಾಯಾತ್ರೆಯು ಹಳೆ ಪಟ್ಟಣದ ವಿಠಲ ಮಂದಿರದಿಂದ ಪ್ರಾರಂಭವಾಗಿ ಚಾವಡಿ, ತಿನದುಕಾನ್ ಗಲ್ಲಿ, ಗಡಿ, ಬೊಮ್ಮಗೊಂಡೇಶ್ವರ ವೃತ, ಬಸ್ ನಿಲ್ದಾಣ, ಡಾ. ಬಿ. ಆರ್ ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತ, ಶ್ರೀ ರಾಮ ಮಂದಿರದ ಮೂಲಕ ಸಾಗಿ ಮಹಾತ್ಮ ಗಾಂಧಿವೃತದಲ್ಲಿ ನಿರ್ಮಿಸಲಾದ ಉತ್ಸವ ಸಮಿತಿ ವೇದಿಕೆಯಲ್ಲಿ ಸಮಾವೇಶ ಗೊಂಡಿತು. ಮೆರವಣಿಗೆಯುದ್ದಕ್ಕೂ ದೇಶ ಭಕ್ತಿಗೀತೆಗಳು, ರಾಮ ಭಕ್ತಿಯ ಗೀತೆಗಳಿಗೆ ಗಣ್ಯರು ಹೆಜ್ಜೆ ಹಾಕಿದರು, ವಿವಿಧ ಕಲಾ ತಂಡದವರು ತಮ್ಮ ಕಲೆಯನ್ನು ಪ್ರದರ್ಶಿಸಿದರು. ಶೋಭಾಯಾತ್ರೆ ಮೆರವಣಿಗೆಯಲ್ಲಿ ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಗುರುಬಸವ ಪಟ್ಟದೇವರು, ಶ್ರೀ ಹವಾಗಿಲಿಂಗೇಶ್ವರ ಶಿವಾಚಾರ್ಯರು, ಶ್ರೀ ರಾಮ ಚೈತನ್ಯ ಮಹಾರಾಜರು, ಸಾಮಾಜಿಕ ಕಾರ್ಯಕರ್ತೆ ಕಾಜಲ್ ಹಿಂದೂಸ್ತಾನಿ, ಪ್ರಮುಖರಾದ ಚನ್ನಬಸವಣ್ಣ ಬಳತೆ, ಶಿವು ಲೋಕಂಡೆ, ಸೋಮನತಪ್ಪ ಅಸ್ಟುರೆ, ಸಚಿನ ಜಾಧವ್, ರವಿ ಕುಂಬಾರ, ವಿಲಾಸ್ ಬಕ್ಕಾ, ಜಗದೀಶ್ ಖಂಡ್ರೆ, ಕೆ.ಡಿ.ಗಣೇಶ್, ಪ್ರಕಾಶ್ ಮಾಶೆಟ್ಟಿ, ಗಂಗಾಧರ ಹೊಸಳ್ಳಿ, ಗುಂಡಯ್ಯ ಸ್ವಾಮಿ, ಸುನೀತಾ ಕುಡತೆ, ಶುಭಾಂಗಿ ಚನ್ನಬಸವಣ್ಣ ಬಳತೆ, ಶೈಲಜಾ ತಳವಾಡೇ,



ಭಾಲ್ಕಿ. ಪಟ್ಟಣದ ವಿಠಲ ಮಂದಿರದ ಹತ್ತಿರ ಶ್ರೀ ರಾಮನವಮಿ ಉತ್ಸವ ನಿಮಿತ್ಯ ಶ್ರೀ ರಾಮನ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಶೋಭಾ ಯಾತ್ರೆಗೆ ಚಾಲನೆ ನೀಡಲಾಯಿತು.

ನಮ್ರತ ಶೆಡೋಲೆ, ಸ್ನೇಹಲ ಅಮಿತ ಅಸ್ತುರೆ, ವೈಶಾಲಿ ಯುವರಾಜ್ ಜಾಧವ್, ಕವಿತಾ ನಿತಿನ್ ಪಾಟೀಲ್, ಗೀತಾ ಅನಿಲಕುಮಾರ ಭೂರೆ, ಅನಿತಾ ವಸಂತ ಪವಾರ್, ಜೈರಾಜ್ ಧಾಬಶೆಟ್ಟಿ, ಅಮಿತ್ ಅಸ್ತುರೆ, ಗುಂಡೇರಾವ್ ಶೆಡೋಲೆ, ವಿಲಾಸ್ ಕನಸೇ, ಕಾಶಿನಾಥ ಕೊಡಗೆ, ನಿರ್ಮಲ ಶ್ರೀನಾಥ್ ಹೇಡಾ, ಜಗದೀಶ್ ಭುರೆ, ಕೈಲಾಸ್ ಪಾಟೀಲ್, ಶರದ್ ದುರ್ಗಳೇ, ಕೇಶವ ಸೂರ್ಯವಂಶಿ, ಸಂಗಮೇಶ್ ಟೆಂಕಲೆ, ಸಂತೋಷ್ ಪಾಟೀಲ್, ಧರ್ಮು ವಾನ್ಕೆ, ಕಪಿಲ್ ಕಲ್ಯಾಣಿ, ಸಂಗಮೇಶ್ ವಾಲಿ, ದತ್ತಾ ಜಾಧವ್, ರಾಜು ಶಿಂಧೆ, ರಾಹುಲ್ ಮೇತ್ರೆ, ಸಂಜಿಕುಮಾರ್ ಭಾವಿಕಟ್ಟಿ, ಪ್ರಿಯಾಂಕಾ ತಾನಾಜಿ, ಪ್ರಭಾವತಿ ದಿಲೀಪ್ ರಾವ್, ಸೇರಿದಂತೆ ಹಲವರು ಇದ್ದರು.

# ಅಗ್ನಿಬನ್ನಿರಾಯರು ಸರ್ವಜನಾಂಗದ ಏಳಿಗೆಗಾಗಿ ಶ್ರಮಿಸಿದವರು

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಕ್ಷತ್ರಿಯ ಸೂಜದ ಆರಾಧ್ಯ ದೈವವಾಗಿರುವ ಶ್ರೀ ಅಗ್ನಿಬನ್ನಿರಾಯರು ಭಾರತೀಯ ಪರಂಪರೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಇವರು ಕೇವಲ ಒಂದೇ ಸಮಾಜಕ್ಕೆ ಸೀಮಿತರಾಗದೇ, ಸಮಸ್ತ ಜನಾಂಗದ ಏಳಿಗೆಗಾಗಿ ಶ್ರಮಿಸಿದವರು ಎಂದು ಜಿಲ್ಲಾಧಿಕಾರಿ ಕಚೇ-ರಿಯ ಚುನಾವಣಾ ಶಾಖೆಯ ತಹಶೀಲ್ದಾರ ಪ್ರಮೋದ ನಾಯ್ಕ ಹೇಳಿದರು.

ಅವರು ಶನಿವಾರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಶ್ರೀ ಅಗ್ನಿಬನ್ನಿರಾಯ ಜಯಂತಿ ಕಾರ್ಯಕ್ರಮವನ್ನು ಅಗ್ನಿಬನ್ನಿರಾಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಅಗ್ನಿಬನ್ನಿರಾಯ ಕುರಿತು ಶಿವಾಜಿ ಕಲಾ, ವಾಣಿಜ್ಯ ಹಾಗೂ ಬಿ.ಸಿ.ಎ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಎ.ಜಿ. ಕೆರಳೆಕರ ವಿಶೇಷ ಉಪನ್ಯಾಸ ನೀಡಿ, ಕ್ಷತ್ರಿಯ ಜನಾಂಗದ ಅಗ್ನಿಬನ್ನಿರಾಯರು ಸರ್ವಜನರ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಿಕೊಂಡವರು. ತಿಗಳ ಸಮಾಜದ ಆರಾಧ್ಯದೈವ್ಯ ಅಷ್ಟೇ ಅಲ್ಲದೇ ಸರ್ವ ಜನಾಂಗದ ಅರಾಧ್ಯದೈವವಾಗಿದ್ದಾರೆ. ಅವರು ಜನರಲ್ಲಿ ಮಾನವೀಯತೆ, ಕರುಣೆ ಮತ್ತು ಧರ್ಮದ ಮೌಲ್ಯಗಳನ್ನು ಬಿತ್ತಿದ ಮಹಾನ್ ವ್ಯಕ್ತಿತ್ವ. ಜನರ ಕಷ್ಟ ಕಾರ್ಪಣ್ಯಗಳನ್ನು ಅರಿತು ಅವುಗಳಿಗೆ ಸೂಕ್ತ ಸಲಹೆ ನೀಡಿ, ಕಾರ್ಯಚಾರಣೆಗೆ ತಂದು ಮನುಕುಲಕ್ಕೆ ಉನ್ನತ್ತಿಕರಣಕ್ಕೆ ಕಾರಣಿಕರ್ತರಾಗಿದ್ದಾರೆ. ಅವರ ಆದರ್ಶ ತತ್ವಗಳು ಪ್ರತಿಯೊಬ್ಬರು ಅಳವಡಿಸಿಕೊಂಡು ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳೋಣ ಎಂದರು ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಸಂಜೀವ್ ಕುಮಾರ್, ಸ್ಟಾರ್ ಚಾಯ್ಸ್ ತಂಡದ ರಾಜನ್ ಎಂ. ಬಾನವಳಿಕರ ಹಾಗೂ ತಂಡದ ಸದಸ್ಯರು ಮತ್ತಿತರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಳಾ ವೆಂ. ನಾಯ್ಕ ಸ್ವಾಗತಿಸಿದರು. ಸ್ಟಾರ್ ಚಾಯ್ಸ್ ತಂಡದ ಸದಸ್ಯೆ ಎಲ್. ತ್ರಿವೇಣಿ ನಿರೂಪಿಸಿ, ವಂದಿಸಿದರು.

# ಗಾಂಜಾ ಮಾರಾಟ: ಇಬ್ಬರು ಆರೋಪಿಗಳ ಬಂಧನ

ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

(ಹೊಸಪೇಟೆ) ಮಾ.27 ರಂದು ಹೊಸಪೇಟೆ ನಗರದ ಚಿತ್ತವಾಡಗಿ ಪೊಲೀಸ್ ಠಾಣಾ ವ್ಯಾಪ್ತಿಯ, ಸಿದ್ಧಿಪ್ರಿಯ ಕಲ್ಯಾಣ ಮಂಟಪದ ಹಿಂಭಾಗದಲ್ಲಿ, ಗಾಂಜಾ ಮಾರಾಟ ಮಾಡುತ್ತಿದ್ದ ಸತೀಶ ಕುಮಾರ್, ಚಿನ್ನಬಾಲು ಆರೋಪಿಗಳನ್ನು, ಪಿ.ಐ ಚಿತ್ತವಾಡಗಿ ಠಾಣೆ ಮತ್ತು ಸಿಬ್ಬಂದಿ ರವರು ವಶಕ್ಕೆ ಪಡೆದು, ಅವರ ಬಳಿ ಇದ್ದ ಸುಮಾರು 1200 ಗ್ರಾಂ ಒಣ ಗಾಂಜಾ (ಅಂದಾಜು ಬೆಲೆ ರೂ. 60,000/-) ಜಪ್ತು ಮಾಡಿ. ಇಬ್ಬರು ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿರುತ್ತದೆ. ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ಈ ಪ್ರಕರಣವನ್ನು ದಾಖಲಿಸಿ, ಮುಂದಿನ ತನಿಖೆಯನ್ನು ಕೈಗೊಂಡಿರುತ್ತದೆ.



# ನಾಳೆ ನಿವೃತ್ತ ನೌಕರರ ಸಂಘದ ಸಭೆ

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಇಲ್ಲಿಯ ತಾಲೂಕು ನಿವೃತ್ತ ನೌಕರರ ಸಂಘದ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಿವೃತ್ತ ಸಂಘದ ನೌಕರರ ಸಭೆ ಕರೆಯಲಾಗಿದೆ ಎಂದು ತಾಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಸವರಾಜ ಮರೆ ತಿಳಿಸಿದ್ದಾರೆ. ಮಾಸಿಕ ಸಭೆಯ ಬಳಿಕ ರಾಜ್ಯ ಸಂಘದ ಆದೇಶದ ಮೇರೆಗೆ ನಿವೃತ್ತ ನೌಕರರ ಕೇಂದ್ರದಿಂದ ಆಗುತ್ತಿರುವ ಅನ್ಯಾಯದ ಬಗ್ಗೆ ತಹಸೀಲ್ ಕಚೇರಿಗೆ ತೆರಳಿ ತಹಸೀಲ್ದಾರ ಮೂಲಕ ಪ್ರಧಾನಿಗಳಿಗೆ ಮನವಿ ಪತ್ರ ಸಲ್ಲಿಸಲು ನಿರ್ಧರಿಸಲಾಗಿದೆ. ನಿವೃತ್ತ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಅರ್ಥಪೂರ್ಣ ಸಮ್ಮೇಳನಕ್ಕೆ ಸರ್ವರು ಕೈ ಜೋಡಿಸಲು ತಗಡೂರು ಕರೆ



ಮಲ್ಲಮ್ಮ ನುಡಿ ವಾರ್ತೆ ಬೀದರ್

ಐತಿಹಾಸಿಕ ಹಾಗೂ ಅರ್ಥಪೂರ್ಣ ಸಮ್ಮೇಳನದ ಯಶಸ್ಸಿಗೆ ಸರ್ವರು ಕೈ ಜೋಡಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಕರೆ ನೀಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ವಿವಿಧ ಸಮಿತಿಗಳ ಪೂರ್ವ ತಯ್ಯಾರಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮ್ಮೆಲ್ಲರ ಕೊರಿಕೆ ಮೆರೆಗೆ ನಾವು ರಾಯಚೂರು ಬಿಟ್ಟು ಇಲ್ಲಿ ಸಮ್ಮೇಳನ ಮಡಲಿಕ್ಕೆ ಅನುಮತಿ ನೀಡಿದ್ದೇವೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು, ವಿಧಾನ ಸಭೆ, ವಿಧಾನ ಪರಿಷತ್ ಸಭಾಪತಿಗಳನ್ನು ಹಾಗೆ ಪ್ರಜಾವಾಣಿ, ವಿಜಯವಾಣಿ, ವಿಜಯ ಕರ್ನಾಟಕ ಸೇರಿದಂತೆ ರಾಜ್ಯ ಮಟ್ಟದ ಎಲ್ಲ ಪತ್ರಿಕೆಗಳ ಸಂಪಾದಕರನ್ನು ಸಮ್ಮೇಳನಕ್ಕೆ ಅವ್ಹಾನಿಸಲಾಗಿದೆ ಎಂದರು.

ಆನಂದ ದೇವಪ್ಪ ಅವರನ್ನು ತಾವೆಲ್ಲ ಸೇರಿ ಅಧ್ಯಕ್ಷರನ್ನಾಗಿ ಮಾಡುವಂತೆ ಒಕ್ಕೂರಲ ಮನವಿ ಮಾಡಿದಕ್ಕೆ ರಾಜ್ಯ ಸಂಘ ಅಡಾಕ್ ಸಮಿತಿ ಮಾಡಿದೆ ಹೊರತು ನಮ್ಮ ತಿರ್ಮಾನವಿಲ್ಲ. ಸಮ್ಮೇಳನ ಸಂದರ್ಭದಲ್ಲಿ ಜರುಗಲಿರುವ ರಾಜ್ಯ ಸಾಮಾನ್ಯ ಸಭೆ ಸಂದರ್ಭದಲ್ಲಿ ತಮ್ಮೆಲ್ಲರ ಕೊರಿಕೆಯಂತೆ ತಾವು ಕಳುಹಿಸುವ ಪದಾಧಿಕಾರಿಗಳ ಪಟ್ಟಿಗೆ ಅನುಮೊದನೆ ನೀಡಲಾಗುವುದು. ಇತ್ತಿಚೀಗೆ ಹೊಸ ಜಾಹಿರಾತು ನೀತಿಯಿಂದ ಪತ್ರಿಕೆಗಳ ಸಂಪಾದಕರಿಗೆ ಆಗುತ್ತಿರುವ ತೊಂದರೆ ಬಗೆಹರಿಸಲು ಮುಖ್ಯಮಂತ್ರಿಗಳಿಗೆ ಈಗಾಗಲೆ ಮನವಿ ಸಲ್ಲಿಸಲಾಗಿದ್ದು, ಸಮ್ಮೇಳನ ಸಂದರ್ಭದಲ್ಲೂ ಸಿಎಂಗೆ ಈ ಕುರಿತು ಬಹಿರಂಗವಾಗಿ ಮನವಿ ಮಾಡುವುದಾಗಿ ಭರವಸೆ ನೀಡಿದರು.

ಸ್ಮರಣ ಸಂಚಿಕೆ ಹಾಗೂ ಕೈಪಿಡಿಗಳನ್ನು ಪ್ರತ್ಯೇಕವಾಗಿ ಹೊರ ತರಲು ಸ್ಮರಣ ಸಂಚಿಕೆ ಸಮಿತಿಯವರು ತುರ್ತು ಸಭೆಗಳನ್ನು ನಡೆಸಿ ಬೀದರ್ ಜಿಲ್ಲೆಯ ಹಿರಿಯ ಪತ್ರಕರ್ತರು ಬೆಳೆದು ಬಂದ ದಾರಿ ಹಾಗೂ ಬೀದರ್ ಜಿಲ್ಲೆಯ ಪತ್ರಿಕೆಗಳ ಕುರಿತ ಲೇಖನಗಳನ್ನು ಆದಷ್ಟು ಶೀಘ್ರ ರಾಜ್ಯ ಘಟಕಕ್ಕೆ ಕಳಿಸತಕ್ಕದ್ದು. ಅರ್ಥಪೂರ್ಣ ಸ್ಮರಣ ಸಂಚಿಕೆ ಹೊರತರಲು ಯುದ್ಧೊಪಾದಿಯಲ್ಲಿ ಕಾರ್ಯ ಕೈಗೊಳ್ಳಿ ಎಂದು ಸ್ಮರಣ ಸಂಚಿಕೆ ಸಮಿತಿಯವರಿಗೆ ಸಲಹೆ ನೀಡಿದರು.

ವಸತಿ ಸಮಿತಿ ಬಗ್ಗೆ ಪ್ರಸ್ತಾಪಿಸಿದ ಅವರು, ವಸತಿ ಸಮಿತಿ, ಸಾರಿಗೆ ಸಮಿತಿಗಳು ಒಂದಕ್ಕೊಂದು ಸಂಬಂಧಿಸಿದ ಸಮಿತಿಗಳಿವೆ. ಉಳಿಯಲು ವಸತಿ, ಉಣ್ಣಲು ಊಟ ಇವು ಮಹತ್ವಪೂರ್ಣವಾದ ವಿಚಾರ. ಹಾಗಾಗಿ ಈ ಎರಡು ಸಮಿತಿಯವರು ಪರಸ್ಪರ ಸಮಾಲೋಚಿಸಿ ಕಾರ್ಯಪ್ರವರ್ತರಾಗುವಂತೆ ಕರೆ ಕೊಟ್ಟರು. ಛಾಯಾಚಿತ್ರ ಪ್ರದರ್ಶನದ ಬಗ್ಗೆ ಸಿದ್ದತಾ ಸಭೆ ನಡೆಸಿದ ಅವರು, ಕಲಬುರಗಿಯ ಮಾಜಿ ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್ ಅವರ ಸಹಯೋಗ ಪಡೆದು ಐತಿಹಾಸಿಕ ಛಾಯಾಚಿತ್ರ ಪ್ರದರ್ಶನದ ತಯ್ಯಾರಿ ನಡೆಸುವಂತೆ ಅಲ್ಲಿದ್ದ ಛಾಯಾಗ್ರಾಹಕರಿಗೆ ಸೂಚಿಸಿದರು. ಹಿರಿಯರು ಹಾಗೂ ಮಾಜಿ ಜಿಲ್ಲಾಧ್ಯಕ್ಷರ ಸಲಹಾ ಸಮಿತಿ, ಪ್ರವಾಸ, ಆಹಾರ, ಮೆರವಣಿಗೆ, ವಸ್ತು ಪ್ರದರ್ಶನ ಮಾರಾಟ ಮಳಿಗೆ, ಪ್ರತಿನಿಧಿಗಳ ನೊಂದಣಿ ಹಾಗೂ ಕಿಟ್ ವಿತರಣಾ ಸಮಿತಿಗಳ ತಯ್ಯಾರಿ ಕುರಿತು ಪೂರ್ವ ಸಿದ್ದತಾ ಸಭೆ ಜರುಗಿತು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಮಾತನಾಡಿ, ಪತ್ರಕರ್ತರು ತಮಗೆ ಸಿಕ್ಕ ಅವಕಾಶ ಸದುಪಯೋಗ ಪಡಿಸಿಕೊಳ್ಳಬೇಕು. ನಿಮ್ಮ ಸ್ಥಾನ ನೀವು ಕಾಯ್ದುಕೊಳ್ಳಬೇಕೆ ವಿನಃ ಆ ಸ್ಥಾನ ನಿಮ್ಮನ್ನು ಕಾಯಬಾರದು. ತಗಡೂರು ಅವರಂಥ ರಾಜ್ಯಾಧ್ಯಕ್ಷರು ನಮಗೆ ಸಿಕ್ಕಿದ್ದು ನಮ್ಮೆಲ್ಲರ ಸೌಭಾಗ್ಯ. ಜಿಲ್ಲೆಗೆ ದೊರಕಿರುವ 40ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿಸಲು ಪ್ರತಿಯೊಬ್ಬರ ಸಹಭಾಗಿತ್ವ ಬಹಳ ಮುಖ್ಯ ಎಂದರು.

ಸಂಘದ ಮಾಜಿ ಜಿಲ್ಲಾಧ್ಯಕ್ಷ ಬಾಬುವಾಲಿ ಮಾತನಾಡಿ, ನಮ್ಮ ಮನವಿಗೆ ಸ್ಪಂದಿಸಿ ಬೀದರ್‌ಗೆ 40ನೇ ಸಮ್ಮೇಳನ ನೀಡಿದಕ್ಕೆ, ನಿಮ್ಮ ಬೈಲಾ ವಿರೂದ್ಧ ಚುನಾವಣೆ ನಡೆಸದೆ ಅವಿರೋಧ ಆಯ್ಕೆ ಪ್ರಕ್ರಿಯೆಗೆ ಮುಂದಾಗಿದ್ದರೂ ಅದಕ್ಕೂ ಸಮ್ಮತಿ ನೀಡಿದಕ್ಕೂ ರಾಜ್ಯ ಸಂಘಕ್ಕೆ ಕೃತಜ್ಞರಾಗಿದ್ದೇವೆ. ಆದರೆ ಸಂಘದ ಜಿಲ್ಲಾ ಪದಾಧಿಕಾರಿಗಳನ್ನು ನೇಮಕ ಮಾಡಿ ಹಾಗೂ ಇಡೀ ರಾಜ್ಯಾದ್ಯಂತ ತಲೆದೂರಿರುವ ಹೊಸ ಜಾಹಿರಾತು ನೀತಿ ಬಗೆಹರಿಸಲು ರಾಜ್ಯ ಸಂಘ ಮುಂದಾಗಬೇಕೆಂದು ಆಗ್ರಹಿಸಿದರು.

ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಅವರು ವಸತಿ, ಸಾರಿಗೆ, ಆರ್ಥಿಕತೆ ಸೇರಿದಂತೆ ವಿವಿಧ ಸಮಿತಿಗಳ ತಯ್ಯಾರಿ ಹಾಗೂ ಕಾರ್ಯಕ್ರಮದ ತಯ್ಯಾರಿ ಬಗ್ಗೆ ಸಭೆಗೆ ವಿವರಿಸಿದರು.

ಸಂಘದ ಮಾಜಿ ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್, ಮಾಜಿ ಜಿಲ್ಲಾಧ್ಯಕ್ಷರಾದ ಬಸವರಾಜ ಕಾಮಶೆಟ್ಟಿ, ಮಾಳಪ್ಪ ಅಡಸಾರೆ, ಸಿದ್ರಾಮಯ್ಯ ಸ್ವಾಮಿ, ಅಶೋಕಕುಮಾರ ಕರಂಜಿ, ಡಿ.ಕೆ ಗಣಪತಿ, ಪತ್ರಕರ್ತರಾದ ಅಪ್ಪಾರಾವ ಸೌದಿ, ಡಾ.ರಜನೀಶ ವಾಲಿ, ಶಶಿ ಪಾಟೀಲ, ಪ್ರಥ್ವಿರಾಜ, ಶಶಿ ಶೆಂಬೆಳ್ಳಿ, ಶಶಿ ಬಂಬುಳಗಿ, ವಿಜಯಕುಮಾರ ಬೆಳ್ದೆ, ದೀಪಕ ಮನ್ನಳ್ಳಿ, ಗೋಪಿಚಂದ್ ತಾಂದಳೆ, ಮಾರೂತಿ ಬಾವಿದೊಡ್ಡಿ, ಶ್ರೀಕಾಂತ ಬಿರಾದಾರ, ನಂದಕುಮಾರ ಕರಂಜೆ, ವಿಜಯಕುಮಾರ ಅಷ್ಟೂರೆ, ಅಜಯ ಭೋಸ್ಲೆ, ಬಸವರಾಜ ಪವಾರ ಸೇರಿದಂತೆ ವಿವಿಧ ಸಮಿತಿಗಳ ನೂರಕ್ಕೂ ಅಧಿಕ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಶಿವಕುಮಾರ ಸ್ವಾಮಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ವೈಭವವಾಗಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ, ಲಿಂಗಸುಗೂರು

ಶ್ರಾವಣಿ ಚಾರಿಟೇಬಲ್ ಟ್ರಸ್ಟ್ ಲಿಂಗಸುಗೂರು ಹಾಗೂ ಶಾಹಿ ಎಕ್ಸ್ಪೋರ್ಟ್ಸ್ ಪ್ರೈ.ಲಿ., ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವು ಶಂಕರ ರೆಡ್ಡಿ ಕಲ್ಯಾಣ ಮಂಟಪ, ಲಿಂಗಸುಗೂರಿನಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಉಂಡಿ ಶಿವಪ್ಪ ಮಂಜುಳಾ ಅವರು ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸುತ್ತಿದ್ದಾರೆ ಎಂದು ಹೇಳಿದರು. ಮಹಿಳಾ ಸಬಲೀಕರಣವೇ ದೇಶದ ಅಭಿವೃದ್ಧಿಗೆ ಮುಖ್ಯ ಆಧಾರವಾಗಿದ್ದು, ಶಿಕ್ಷಣ ಹಾಗೂ ಸ್ವಾವಲಂಬನೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶಾಹಿ ಎಕ್ಸ್ಪೋರ್ಟ್ಸ್ ಪ್ರೈ.ಲಿ., ಪೀಣ್ಯ, ಬೆಂಗಳೂರು ಸಂಸ್ಥೆಯ ಡೆಪ್ಯೂಟಿ ಜನರಲ್ ಮ್ಯಾನೇಜರ್ ಹೆಚ್.ಆರ್. ಶ್ರೀ ಪೊನ್ನಸ್ವಾಮಿ ಎನ್. ಅವರು, ಮಹಿಳೆಯರಿಗೆ ಉದ್ಯೋಗಾವಕಾಶಗಳ ಮಹತ್ವವನ್ನು ವಿವರಿಸಿ, ಕೈಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿರುವುದು ಸಂತಸದ ವಿಷಯ ಎಂದರು. ಇದೇ ವೇಳೆ ಜನಶಿಕ್ಷಣ ಸಂಸ್ಥೆ ರಾಯಚೂರಿನ ನಿರ್ದೇಶಕರಾದ ಸದಾನಂದ ಎಂ.ಪಿ. ಅವರು, ಮಹಿಳೆಯರ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಯ ಅಗತ್ಯತೆಯನ್ನು ಒತ್ತಿಹೇಳಿದರು. ನಿರೂಪಣೆಯನ್ನು ಶ್ರೀಮತಿ ಅಶ್ವಿನಿ ರಂಗನಾಥ ಅವರು ನಡೆಸಿಕೊಟ್ಟರು. ಕಾರ್ಯಕ್ರಮದ ಸಂಯೋಜಕರಾಗಿ ಶ್ರೀಮತಿ ಪವಿತ್ರಾ ಹೂಗಾರ ಅವರು ಕಾರ್ಯನಿರ್ವಹಿಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಲಿಂಗಸಗೂರು ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಭೂಪನಗೌಡ ಪಾಟೀಲ್ ಹಾಗೂ ಮಹಿಳೆಯರು ಉಪಸ್ಥಿತರಿದ್ದರು

# ಸಹಕಾರ ಸಂಘದ ಸಹಯೋಗದಲ್ಲಿ ನೂತನ ಜೋಳ ಖರೀದಿ ಕೇಂದ್ರ ಪ್ರಾರಂಭ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಕರ್ನಾಟಕ ರೈತರಿಂದ ಬೆಂಬಲ ಬೆಲೆಯಲ್ಲಿ (MSP) ಮುಂಗಾರು ಮತ್ತು ಹಿಂಗಾರು ಜೋಳ/ಮೆಕ್ಕೆಜೋಳವನ್ನು ಖರೀದಿಸಲು ರಾಜ್ಯದ ವಿವಿಧ ಎಪಿಎಂಸಿ (ಂಕಒಅ) ಮಾರುಕಟ್ಟೆಗಳಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಿದ್ದು. ಕೆಎಂಎಫ್ (KMF) ಮೂಲಕ ರೈತರಿಂದ ನೇರವಾಗಿ ಪ್ರತಿ ಕ್ವಿಂಟಾಲ್‌ಗೆ ಬೆಂಬಲ ಬೆಲೆ (ಉದಾಹರಣೆಗೆ 2,400–3,000) ನಿಗದಿಪಡಿಸಿ, ಒಬ್ಬ ರೈತರಿಂದ



ಗರಿಷ್ಠ 20–25 ಕ್ವಿಂಟಾಲ್ ವರೆಗೆ ಖರೀದಿ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಂಧನೂರು ತಾಲೂಕಿನ ಹಂಚಿನಾಳ ಕ್ಯಾಂಪ್‌ನ ಸಹಕಾರ ಸಂಘದ ವತಿಯಿಂದ ಇಂದು ಶುಕ್ರವಾರ ನೂತನ ಜೋಳ ಖರೀದಿ ಕೇಂದ್ರವನ್ನು ಜೋಳ ಖರೀದಿಸುವ ಮೂಲಕ ಜೋಳದ ರಾಶಿಗೆ ಪೂಜೆ ಸಲ್ಲಿಸಿ ಪ್ರಾರಂಭಿಸಲಾಯಿತು.

ಗದಗ, ಲಕ್ಷ್ಮೇಶ್ವರ, ಮುಂಡರಗಿ, ನರಗುಂದ, ರೋಣ ಮುಂತಾದ ಎಪಿಎಂಸಿ ಪ್ರಾಂಗಣಗಳಲ್ಲಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಕ್ರಿಯೆ: ಆಯಾ ಜಿಲ್ಲೆಯ APMC ಅಥವಾ ಕೃಷಿ ಇಲಾಖೆ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಅಗತ್ಯ ದಾಖಲೆಗಳು: ಪಹಣಿ (RTC), ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಮತ್ತು ಬೆಳೆ ದೃಢೀಕರಣ ಪತ್ರ. ಉದ್ದೇಶ: ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ರೈತರಿಗೆ ಬೆಂಬಲ ಬೆಲೆ ಒದಗಿಸಿ ನಷ್ಟ ತಪ್ಪಿಸುವುದು.

ರೈತರು ಹತ್ತಿರದ ಎಪಿಎಂಸಿ ಕೇಂದ್ರ ಅಥವಾ ಕೃಷಿ ಇಲಾಖೆಯನ್ನು ಸಂಪರ್ಕಿಸಿ ನಿಖರವಾದ ದರ ಮತ್ತು ನೋಂದಣಿ ದಿನಾಂಕದ ಬಗ್ಗೆ ಮಾಹಿತಿ ಪಡೆಯಬಹುದಾಗಿದೆ.

ಈ ಸಂದರ್ಭದಲ್ಲಿ. ಶಂಬಣ್ಣ ಸಾಹುಕಾರ್,

ಸೂಗೂರು ವೀರೇಶಪ್ಪ, ಉಪ ತಹಶೀಲ್ದಾರರು, ಕೃಷಿ ಅಧಿಕಾರಿಗಳು, ಸಂಘದ ಅಧ್ಯಕರಾದ ಶೇಖರಗೌಡ ಸೇರಿದಂತೆ ನಿರ್ದೇಶಕರು ರೈತರು, ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಆರೋಗ್ಯದ ಸಮತೋಲನ ಅಗತ್ಯ: ನ್ಯಾ.ಶಾಂತಿ




• ಮಲ್ಲಮ್ಮ ನುಡಿ ವಾರ್ತೆ , ಬಳ್ಳಾರಿ

ಆರೋಗ್ಯ ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಬಹಳ ಮುಖ್ಯವಾದದ್ದು. ಶಾರೀರಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯದ ಸಮತೋಲನವೂ ಮುಖ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ನ್ಯಾಯಾಲಯದ

ಆವರಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನ್ಯಾಯಾಲಯದ ಸಿಬ್ಬಂದಿಗಳಿಗಾಗಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ನಾವು ಯಾವುದೇ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ ಎಂದರು.

ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಮಹಿಳೆಯರು ಸದಾ ಮನೆಯ ಕೆಲಸ ಅಥವಾ ಕಚೇ–ರಿಯ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಇದರಿಂದಾಗಿ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅವರಿಗೆ ಕಷ್ಟವಾಗುತ್ತಿದೆ ಎಂದರಲ್ಲದೇ, ಇಂತಹ ಶಿಬಿರಗಳು ಮಹಿಳೆಯರಿಗೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಉತ್ತಮ ವೇದಿಕೆಯಾಗಲಿವೆ ಎಂದು ಅವರು ಅಭಿಪ್ರಾಯಪಟ್ಟರು.

ಶಿಬಿರದಲ್ಲಿ ಭಾಗವಹಿಸಿರುವ ನುರಿತ ವೈದ್ಯರಿಂದ ಮಹಿಳೆಯರು ಸೂಕ್ತ ಸಲಹೆ, ಸೂಚನೆ ಹಾಗೂ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು ಮತ್ತು ತಮ್ಮ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಶಿಬಿರ ಆಯೋಜನೆಗೆ ಅನುವು ಮಾಡಿಕೊಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸಕರಿಗೆ ಅಭಿನಂದನೆ ತಿಳಿಸಿದರು.

ಬಳಿಕ ನ್ಯಾಯಾಧೀಶರು ಸಾಮಾನ್ಯ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಈ ಸಂದರ್ಭದಲ್ಲಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಿ.ಪ್ರಮೋದ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್. ಎನ್.ಹೊಸಮನೆ, ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ರಾಘವೇಂದ್ರ ಗೌಡ.ಬಿ.ಜಿ., ಪ್ರಿನ್ಸಿಪಲ್ ಕೌಟುಂಬಿಕ ನ್ಯಾಯಾಧೀಶರಾದ ವೆಂಕಟೇಶ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಇಬ್ರಾಹಿಂ ಎಂ.ಮುಜಾವರ್, ಒಂದನೇ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ನಸ್ರತ್ ಮುಖ್ತಾರ್ ಅಹ್ಮದ್ ಖಾನ್, ಪ್ರಿನ್ಸಿಪಲ್ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ನಾಗೇಶ್ ನಾಯ್ಕ, 1ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಸಿದ್ದಲಿಂಗಯ್ಯ ಗಂಗಾಧರ ಮಠ, 3ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಮುದುಕಪ್ಪ ಒಡನ್ ಸೇರಿದಂತೆ ಜಿಲ್ಲಾ ನ್ಯಾಯಾಲಯದ ಅಧಿಕಾರಿ–ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

# ಜ್ಞಾನವಂತರನ್ನು ಸಮಾಜ ಹರಿಸಿ ಮೆರೆಸುತ್ತದೆ ನ್ಯಾ. ಯರನಾಳ ಅಭಿಮತ



ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಜ್ಞಾನವನ್ನು ಮೀರಿಸುವುದು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ. ಹೀಗಾಗಿ ಸಂಪತ್ತಿಗಿಂತ ಜ್ಞಾನಕ್ಕೆ ಹೆಚ್ಚು ಮಹತ್ವ ಕೊಡುವಂತೆ ಪಟ್ಟಣದ ನ್ಯಾಯವಾದಿ ಶಶಿಧರ ಎ ಯರನಾಳ ಅಭಿಪ್ರಾಯಪಟ್ಟರು. ತಾಲೂಕಿನ ಮುತ್ತಗಿ ಗ್ರಾಮದ ಲಿಂ. ರುದ್ರಮುನಿ ಶಿವಾಚಾರ್ಯ 88ನೇ ಪುಣ್ಯರಾಧನೆಯ ಜಾತ್ರಾ ಮಹೋತ್ಸವ ನಿಮಿತ್ಯ ವೀರ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಯವರ ತುಲಾಭಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಜ್ಞಾನ ವೃದ್ಧಿ ಸಂದೇಶ ನೀಡುವುದೇ ತುಲಾಭಾರದ ಉದ್ದೇಶವಾಗಿದೆ.

ಸಮಾಜದ ಅಭಿವೃದ್ಧಿಗೆ ತುಲಾಭಾರ ಸಹಕಾರಿಯಾಗಿದೆ. ಜ್ಞಾನದಿಂದ ಮಾತ್ರವೇ ಸಂಪತ್ತು ವೃದ್ಧಿಯಾಗಲು ಸಾಧ್ಯ. ಮಕ್ಕಳಿಗೆ ಸಂಪತ್ತಿಗಿಂತ ಜ್ಞಾನದ ಮಹತ್ವ ತಿಳಿಸುವಂತೆ ಪಾಲಕರಿಗೆ ಕರೆ ನೀಡಿದ ಅವರು. ಪಾಲಕರ ಕಷ್ಟವನ್ನರಿತು ಸಮಾಜದಲ್ಲಿ ಮಾದರಿ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವುದು ನಿಜಕ್ಕೂ ದುರಂತದ ವಿಷಯ. ಸಮಾಜ ಸುಧಾರಣೆಗೆ ಸಾಧು–ಸಂತರ ತ್ಯಾಗ ಜೀವನ ನಿಜಕ್ಕೂ ಶ್ಲಾಘನೀಯವಾದುದು. ಭಕ್ತಿ, ಜ್ಞಾನ ಹಾಗೂ ದಾನದಿಂದ ಮಾತ್ರ ಮಠಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ತಾಳಿಕೋಟೆಯ ಶ್ರೀ ಮಹಾಂತ ದೇವರು ಕಲಬುರ್ಗಿಯ ಶರಣಬಸವೇಶ್ವರ ಪುರಾಣ ನಡೆಸಿಕೊಟ್ಟರು. ಕೊಡೆಕಲ್ ಈರಸಂಗಯ್ಯ ಶ್ರೀಗಳು, ಮುತ್ತತ್ತಿಯ ಶ್ರೀಗಳು, ಭಾಜಪ ಮುಖಂಡ ಜಗದೀಶ ಸುನಗದ, ಬಾಲರಾಜ ರೆಡ್ಡಿ, ನ್ಯಾ. ರಮೇಶ ವಗ್ಗರ ಮಾತನಾಡಿದರು. ವೈ.ಕೆ ಪತ್ತಾರ ನಿರೂಪಿಸಿದರು . ವೀರರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಮಠಪತಿ ಪರಿವಾರದವರು ಬೆಲ್ಲದಿಂದ ತುಲಾಭಾರ ನಡೆಸಿದರು. ಲೀಲಾವು ಜರುಗಿದವು. ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಇಂದು ಸಂಜೆ ಶ್ರೀ ರುದ್ರ ಸ್ವಾಮೀಜಿ ಯುತ್ ಫೌಂಡೇಶನ್ ವತಿಯಿಂದ ಹಾಸ್ಯ ಕಲಾವಿದೆ ಇಂದುಮತಿ ಸಾಲಿಮಠ ತಂಡದಿಂದ ಹರಟೆ ಕಾರ್ಯಕ್ರಮ ಜರುಗಲಿದೆ ಎಂದು ಶ್ರೀ ಮಠ ಪ್ರಕಟಣೆಯಲ್ಲಿ ತಿಳಿಸಿದೆ.

# ಜಗತ್ತಿನಲ್ಲಿರುವುದು ಎರಡೇ ಧರ್ಮ, ಒಂದು ಧರ್ಮ ಇನ್ನೊಂದು ಅಧರ್ಮ

## ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದಿಂದ ಶ್ರೀರಾಮ ನವಮಿ ಉತ್ಸವ ಕಾಜಲ್ ಹಿಂದೂಸ್ಥಾನಿ ಅಭಿಮತ




ಭಾಲ್ಕಿ: ಪ್ರಪಂಚದಲ್ಲಿರುವುದು ಎರಡೇ ಧರ್ಮಗಳು, ಒಂದು ಧರ್ಮ ಇನ್ನೊಂದು ಅಧರ್ಮಗಳಾಗಿವೆ, ಧರ್ಮ ಎಂದರೆ ರಾಮ, ರಾಕ್ಷಸೀಯ ಗುಣಗಳಿರುವವರೇ ಅಧರ್ಮಿಗಳು ಎಂದು ಗುಜರಾತಿನ ಸಾಮಾಜಿಕ ಕಾರ್ಯಕರ್ತೆ ಕಾಜಲ್ ಹಿಂದೂಸ್ತಾನಿ ಹೇಳಿದರು.

ಪಟ್ಟಣದ ಮಹಾತ್ಮಾಗಾಂಧಿ ವೃತ್ತದಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ಶ್ರೀರಾಮನವಮಿ ಉತ್ಸವ – ಭಾಲ್ಕಿ, ಸಾರ್ವಜನಿಕ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀರಾಮಚಂದ್ರ ಆರಾಧಕರು ಧರ್ಮೀಯಗಳಾಗಿದ್ದರೆ, ಭೂಮಾಫಿಯಾ, ಲವ್ ಜಿಹಾದ್, ಮತಾಂತರ ಮಾಡುವ ರಾಕ್ಷಸಿ ಗುಣಗಳುಳ್ಳವರೇ ಅಧರ್ಮಿಯರಾಗಿದ್ದಾರೆ. ಇಂದು ಈ ಮೂರು ರಾಕ್ಷಸ ಗುಣಗಳನ್ನು ಉಳ್ಳವವರನ್ನು ಸಂಹರಿಸುವ ಕಾರ್ಯವಾಗಬೇಕಿದೆ. ಈ ರಾಕ್ಷಸ ನಿರ್ನಾಮ ಮಾಡುವ ಕಾಲ ಬಂದಿದೆ. ಜಾತಿ ಭೇದ ಮರೆತು ನಾವೆಲ್ಲರೂ ಹಿಂದೂಗಳಾಗಿ ಶ್ರೀ ರಾಮನ ಆದರ್ಶಗಳನ್ನು ಮೈಗೂಡಿಸಿಕೊಂಡು ರಾಕ್ಷಸೀಯ ತತ್ವಗಳುಳ್ಳವರನ್ನು ಸಂಹರಿಸಬೇಕು. ಇಲ್ಲದಿದ್ದರೆ ನಮಗೆ ಉಳಿಗಾಲವಿಲ್ಲ ಎಂದು ಹೇಳಿದರು.

ಮೆಹಕರ, ತಡೋಳಾ, ಡೋಣಗಾಪೂರ ಕಟ್ಟಿಮನಿ ಹಿರೇಮಠ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ತಾಳ್ಮೆಯಿಂದ ಬದುಕುವ ಜೀವನ ಶೈಲಿ ಇಂತಹ ರಾಮೋತ್ಸವದಿಂದ ದೊರೆ–ಯುತ್ತದೆ. ನಮ್ಮ ಯುವಕರು ದುಶ್ಚಟಗಳಿಗೆ ಬಲಿಯಾಗದೇ ಇಂತಹ ರಾಮನವಮಿ ಉತ್ಸವ ಸೇರಿದಂತೆ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಕೊಳ್ಳಬೇಕು. ರಾಜಕೀಯ ನಾಯಕರ ಹಿಂದೆ ಬಿದ್ದವರು ಹೊಲ ಮನಿ ಕಳೆದುಕೊಳ್ಳಬೇಕಾಗುತ್ತದೆ. ಸ್ವಂತ ಉದ್ಯೋಗ ಕಂಡುಕೊಂಡು ಉತ್ತಮ ಜೀವನ ಸಾಗಿಸುವ ಕಾರ್ಯ ಮಾಡಬೇಕು ಎಂದು ಯುವಕರಿಗೆ ಕರೆ ನೀಡಿದರು.

> ಸಾಮಾಜಿಕ ಜಾಲತಾಣಗಳಾದ ಇನ್ಸ್ಟಾಗ್ರಾಂಗಳು ಇಂದು ಕೋಟಾಗ್ರಾಂ ಗಳಾಗುತ್ತಿವೆ. ನಮ್ಮ ಯುವತಿಯರು ಅರೆನಗ್ನ ವಸ್ತ್ರ ಧರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಡುತ್ತಿರುವುದು ವ್ಯಥೆಯ ಸಂಗತಿಯಾಗಿದೆ. ಮಾತೃಶಕ್ತಿ ಇದನ್ನು ತಡೆಯದಿದ್ದರೆ ನಮಗೆ ಉಳಿಗಾಲವಿಲ್ಲ. ಕಾಜಲ ಹಿಂದೂಸ್ತಾನಿ, ಸಾಮಾಜಿಕ ಕಾರ್ಯಕರ್ತೆ, ಗುರಜರಾತ.

ಹಿರೇಮಠ ಸಂಸ್ಥಾನದ ಶ್ರೀ ಮಾಹಾಲಿಂಗ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಭೌಗೋಳಿಕವಾಗಿ ನಾವೆಲ್ಲರೂ ಹಿಂದೂಗಳೆ, ನಮ್ಮ ನೆಲದ ಮೂಲ ಪರಂಪರೆಯಲ್ಲಿ ನಾವೆಲ್ಲರೂ ಒಂದೇ ಆಗಿದ್ದೇವೆ, ಕಾಲ ಬದಲಾದಂತೆ ಧರ್ಮಗುರುಗಳು ಹುಟ್ಟಿಬಂದು ತಮಗೆ ಬೇಕಾದ ಆಚರಣೆಯಿಂದ ಬದುಕಲು ಕಲಿಸುತ್ತಾರೆ ಎಂದು ಹೇಳಿದರು.

ಹಲಬರ್ಗಾ ಮಠದ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಬಂಜಾರಾ ಶಕ್ತಿ ಪೀಠದ ಶ್ರೀ ರಾಮ ಚೈತನ್ಯ ಮಹಾರಾಜರು ಶ್ರೀ ರಾಮನವಮಿ ಉತ್ಸವದ ಆಚರಣೆಯ ಬಗ್ಗೆ ಮಾತನಾಡಿದರು. ಇದೇ ವೇಳೆ ಗುಜರಾತಿನ ಸಾಮಾಜಿಕ ಕಾರ್ಯಕರ್ತೆ ಕಾಜಲ ಹಿಂದೂಸ್ತಾನಿ ಯವರಿಗೆ ಶುಭಾಂಗಿ ಬಳತೆ, ಸುನಿತಾ ಕುಡತೆ, ಡಾ। ಕವಿತಾ ನಿತಿನ ಪಾಟೀಲ ಸೇರಿದಂತೆ ಭಾಲ್ಕಿಯ ಮಾತೃಶಕ್ತಿ ಪದಾಧಿಕಾರಿಗಳು ಉಡಿತುಂಬುವ ಕಾರ್ಯಕ್ರಮ ನಡೆಸಿಕೊಟ್ಟರು.

ಹಿಂದೂ ಮುಖಂಡ ಶಿವು ಲೋಖಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಚನ್ನಬಸವಣ್ಣ ಬಳತೆ, ಪ್ರಕಾಶ ಮಾಶೆಟ್ಟೆ, ಜೈಕಿಶನ ಬಿಯಾಣಿ, ಸಚಿನ ಜಾಧವ, ರವಿಕುಂಬಾರ, ಅಮರ ಜೊಳದಪಕೆ, ಸಾಗರ ಮಲಾಣಿ, ಶೈಲೇಶ ಮಾಲಪಾಣಿ, ವ್ಹಿಎಚ್‌ಪಿ ಜಿಲ್ಲಾಧ್ಯಕ್ಷ ವಿರಶೆಟ್ಟಿ ಖಾಮಾ, ಸತೀಶ ನೌಹಾದೆ, ವಾಸು ಮಹಾರಾಜ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಕಿಶನರಾವ ಪಾಟೀಲ ಇಂಚೂರಕರ, ಡಾ। ಜಗದೀಶ ಭೂರೆ ಉಪಸ್ಥಿತರಿದ್ದರು.

# ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ: ಭರತ್ ರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಶಾಸಕ ನಾರಾ ಭರತ್‌ರೆಡ್ಡಿ ಬಳ್ಳಾರಿ ಮಹಾನಗರ ಪಾಲಿಕೆಯ 21 ಮತ್ತು 24ನೇ ವಾರ್ಡಿನ ವಾರ್ಡುಗಳ ವ್ಯಾಪ್ತಿಯಲ್ಲಿ ಬರುವ ಹೆಚ್ ಎಲ್‌ಸಿ ಉಪ ಕಾಲುವೆ ಮೇಲಿನ ನಿವಾಸಿಗಳಿಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಬಂಧಿಸಿದ ಅಧಿಕಾ–ರಿಗಳಿಗೆ ಸೂಚಿಸಿದರು.


ಸದರಿ ವಾರ್ಡುಗಳ ವ್ಯಾಪ್ತಿಯಲ್ಲಿ ಬರುವ ನಿವಾಸಿಗಳು ತಮಗೆ ಕುಡಿಯುವ ನೀರಿನ ಸರಬರಾಜು ಸರಿಯಾಗಿ ಆಗುತ್ತಿಲ್ಲ ಎಂದು ನಗರ ಶಾಸಕ ನಾರಾಭರತ್ ರೆಡ್ಡಿ ಅವರನ್ನು ಭೇಟಿಯಾಗಿ ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಇದಕ್ಕೆ ಶಾಸಕ ಭರತ್ ರೆಡ್ಡಿ ಅವರು ತಕ್ಷಣವೇ ಸ್ಪಂದಿಸಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಖುದ್ದಾಗಿ ಕರೆ ಮಾಡಿ ಅಲ್ಲಿನ ನಿವಾಸಿಗಳಿಗೆ ಕುಡಿಯುವ ನೀರಿಗೆ ಯಾವುದೇ ರೀತಿ ತೊಂದ–ರೆಯಾಗದಂತೆ ನೀರಿನ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದರು.

ಬಳ್ಳಾರಿ ನಗರದ ಶಾಸಕರಾದ ನಾರಾ ಭರತ್ ರೆಡ್ಡಿ ಅವರ ಸೂಚನೆ ಮೇರೆಗೆ ಇಂದು ಬೆಳಗ್ಗೆ ಆ ವಾರ್ಡುಗಳ ಮುಖಂಡರಾದ ಎಚ್ ಎಸ್ ಹಿರೇಮಠ ಅವರ ಜೊತೆಗೆ ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರಾದ ಮಹೇಶ್, ಸಹಾಯಕ ಅಭಿಯಂತರರಾದ ವೀರೇಶ್ ಕಿರಿಯ

ಅಭಿಯಂತರರಾದ ಶಿವಾನಂದ್ ಮತ್ತು ವಾಟರ್ ಬೂಸ್ಟರ್‌ನ ಸಿಬ್ಬಂದಿಗಳ ಜೊತೆಗೆ ಬಂದು ಅಲ್ಲಿನ ಸಮಸ್ಯೆಯನ್ನು ಆಲಿಸಿದರು. ಅಲ್ಲದೆ ನಿಮಗೆ ನೀರಿನ ಯಾವುದೇ ತೊಂದರೆಯಾಗದಂತೆ ಸಮಸ್ಯೆಗೆ ಪರಿಹಾರ ಸೂಚಿಸಿ ಹೊಸ ಕುಡಿಯುವ ನೀರಿನ ಪೈಪ್ ಲೈನ್ ಅನ್ನು ಅಳವಡಿಸುತ್ತೇವೆಂದು ಹೇಳಿದರು. ಇದರಿಂದ ಅಲ್ಲಿನ ಜನರು ಶಾಸಕರ ಕಾರ್ಯದ ಮತ್ತು ಮುತುವರ್ಜಿ

ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇಲ್ಲಿಯವರೆಗೆ ನಮಗೆ ಸಮಸ್ಯೆ ಅಂತ ಹೇಳಿದ ತಕ್ಷಣವೇ ಈ ರೀತಿ ಸ್ಪಂದಿಸಿದ ಶಾಸಕರನ್ನು ನಾವು ಯಾವುದೇ ರೀತಿಯಲ್ಲಿ ಮರೆಯಲಿಕ್ಕೆ ಆಗುವುದಿಲ್ಲ ಎಂದು ಸಹಾ ಅವರು ಕೊಂಡಾಡಿದರು. ಈ ಸಂದರ್ಭದಲ್ಲಿ ನಿವಾಸಿಗಳಾದ ಶೇಖರ್, ಪರಶುರಾಮ್, ಸೋಮಪ್ಪ, ಇನ್ನಿತರ ಮಹಿಳೆಯರು ಭಾಗವಹಿಸಿದ್ದರು.

# ರಂಗಭೂಮಿಯ ಮೂಲಕ ಜೀವನ ಮೌಲ್ಯಗಳ ಬೋಧನೆ ವಿಶೇಷ ಉಪನ್ಯಾಸ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಾಡೋಜ ಬುರ್ರಕಥಾ ಈರಮ್ಮ ಫೌಂಡೇಶನ್, ಹಳೇ ದರೋಜಿ ಸಂಸ್ಥೆಯು ಆಯೋಜಿಸಿದ "ರಂಗಭೂಮಿಯ ಮೂಲಕ ಜೀವನ ಮೌಲ್ಯಗಳ ಬೋಧನೆ" ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕದ ಖ್ಯಾತ ರಂಗಕರ್ಮಿಗಳು ಸಿ. ಬಸವಲಿಂಗಯ್ಯ ಅವರು ಮಾತನಾಡಿ, ರಂಗಭೂಮಿ ಜೀವನದ ಪ್ರತಿಬಿಂಬವಾಗಿದ್ದು, ಅದು ವ್ಯಕ್ತಿಯ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ರೂಪಿಸುವ ಪ್ರಮುಖ ಸಾಧನವಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ನಾಟಕಗಳ ಮೂಲಕ ಸತ್ಯ, ಸಹಾನುಭೂತಿ, ಸಹಕಾರ, ಶಿಸ್ತು ಮುಂತಾದ ಮೌಲ್ಯಗಳನ್ನು ಅನುಭವಾತ್ಮಕವಾಗಿ ಕಲಿಯಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಇಂದಿನ ಯಾಂತ್ರಿಕ ಯುಗದಲ್ಲಿಯೂ ರಂಗಭೂಮಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಅಶ್ವ ರಾಮು ಅವರು ಮಾತನಾಡಿ, ಶಿಕ್ಷಣದಲ್ಲಿ ಮೌಲ್ಯಾಧಾರಿತ ಕಲಿಕೆಯ ಅಗತ್ಯವನ್ನು ಒತ್ತಿ ಹೇಳಿದರು. ರಂಗಭೂಮಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪ್ರೇರಣೆ ನೀಡುವ ಶಕ್ತಿಯುತ ಮಾಧ್ಯಮವಾಗಿದೆ ಎಂದು ಅವರು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬಳ್ಳಾರಿಯ ಖ್ಯಾತ ರಂಗಕರ್ಮಿಗಳು ಪುರುಷೋತ್ತಮ ಹಂದ್ಯಾಳು ಅವರು ಮಾತನಾಡಿ, ಸ್ಥಳೀಯ ಕಲೆಯ ಸಂರಕ್ಷಣೆ ಮತ್ತು ರಂಗಭೂಮಿಯ ಬೆಳವಣಿಗೆಯಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ರಂಗಭೂಮಿಯ ಮೂಲಕ ಸಮಾಜದ ಸಮಸ್ಯೆಗಳನ್ನು ಅರಿತುಕೊಂಡು, ಸಕಾರಾತ್ಮಕ ಬದಲಾವಣೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಪ್ರಾರಂಭದಲ್ಲಿ ಸಹಾಯಕ ಪ್ರಾಧ್ಯಾಪಕರು ಹಾಗೂ ಸಾಹಿತಿಗಳಾದ ಆಲಂಬಾಷಾ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಕಾರ್ಯಕ್ರಮದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು. ರಂಗಭೂಮಿ ಶಿಕ್ಷಣ ಕ್ಷೇತ್ರದಲ್ಲಿ ಪರಿಣಾಮಕಾರಿ ಸಾಧನವಾಗಿದ್ದು, ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ ವೃಂದ, ಪ್ರಶಿಕ್ಷಣಾರ್ಥಿಗಳು ಹಾಗೂ ಕಲಾಭಿಮಾನಿಗಳು ಭಾಗವಹಿಸಿದ್ದರು. ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಮೌಲ್ಯಾಧಾರಿತ ಶಿಕ್ಷಣದ ಅರಿವು ಮೂಡಿಸಿ, ರಂಗಭೂಮಿಯ ಮಹತ್ವವನ್ನು ಮತ್ತಷ್ಟು ಎತ್ತಿಹಿಡಿದಿತು. ಪ್ರಾರ್ಥನೆ ಕುಮಾರಿ ಸುಸ್ಮ ಬಿ ಎಚ್ ಎಮ್, ವಂದನಾರ್ಪಣೆ ಬೋಧಕಿ ಚಂದ್ರಿಕಾ ಎ ವೈ , ಬೋಧಕಿ ಅನುಷಾ ಎನ್ ಅವರು ಕಾರ್ಯಕ್ರಮ ನಿರೂಪಿಸಿದರು.

# ರವಿಕುಮಾರ ಎಸ್ಪಿಯಾಗಿ ಬಡ್ತಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಇಲ್ಲಿ ಅಡಿಷನಲ್ ಎಸ್ ಪಿ(1) ಕೆ. ಪಿ. ರವಿಕುಮಾರ್ ಅವರಿಗೆ ಎಸ್ಪಿಯಾಗಿ ಬಡ್ತಿ ನೀಡಿರುವ ಸರ್ಕಾರ ಅವರನ್ನು ಬೆಂಗಳೂರಿನ ಇಂಟಲಿಜೆನ್ಸ್ ಇಲಾಖೆಯ ಎಸ್ಪಿಯಾಗಿ ವರ್ಗಾವಣೆ ಮಾಡಿ ಆದೇಶಿಸಿದೆ.

ಇಲ್ಲಿಯೇ ಎಎಸ್ಪಿ 2 ಆಗಿದ್ದ ಎನ್. ನವೀನ್ ಕುಮಾರ್ ಅವರನ್ನು ಮಂಡ್ಯಗೆ ವರ್ಗಾವಣೆ ಮಾಡಿದ ಆದೇಶ ಹಿಂಪಡೆದು. ಅವರನ್ನು ಬಳ್ಳಾರಿಯ ಅಡಿಷನ್ ಎಸ್ಪಿ (1) ಸ್ಥಾನದಕ್ಕೆ ವರ್ಗಾವಣೆ ಮಾಡಿದೆ.

# ಪರಶುರಾಮಗೆ ಸಿಎಂ ಚಿನ್ನದ ಪದಕ

• **ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ**



ಇಲ್ಲಿನ ಪೊಲೀಸ್ ಠಾಣೆಯ ಪಿ.ಎಸ್.ಐ ಪರಶುರಾಮ ಅವರು 2025ನೇ ಸಾಲಿನ ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಆಯ್ಕೆಯಾಗಿದ್ದಾರೆ.

ಯಾದಗಿರಿ ಜಿಲ್ಲೆಯ ಶಾಹಪುರಿನ ಪರಶುರಾಮ ಅವರು ಬಳ್ಳಾರಿ ಜಿಲ್ಲೆಯಲ್ಲಿ ಪಿ.ಎಸ್.ಐ ಆಗಿ ನಿಯೋಜನೆಗೊಂಡಿದ್ದರು. ಬಳಿಕ ಬಳ್ಳಾರಿಯ ಎ.ಪಿ.ಎಂ.ಸಿ ಮತ್ತು ಮೋಕಾ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದರು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಹಚ್ಚೊಳ್ಳಿ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದ ಅವರು ಜನಸ್ನೇಹಿ ಪಿ.ಎಸ್.ಐ ಎಂದು ಗುರುತಿಸಿಕೊಂಡಿದ್ದರು. ವಿವಿಧ ಠಾಣೆಯಲ್ಲಿ ಕರ್ತವ್ಯದಲ್ಲಿರುವಾಗ ಉತ್ತಮ ಸೇವೆ ಸಲ್ಲಿಸಿದ್ದರು. ಸದ್ಯ ಅವರು ಸಿರುಗುಪ್ಪ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

# ನಿತ್ಯದ ಘಟನೆಗೆ ಕನ್ನಡಿ ಹಿಡಿವ ಮಾಧ್ಯಮ: ಉಷಾರಾಣಿ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಸಮಾಜದಲ್ಲಿ ನಿತ್ಯ ನಡೆಯುವ ಘಟನೆಗಳಿಗೆ ರಂಗಭೂಮಿ ಸಮರ್ಥವಾಗಿ ಕನ್ನಡಿ ಹಿಡಿಯುತ್ತಲೇ, ಹೊಸ ಆಲೋಚನೆಗೆ ಈಡು ಮಾಡುವ ಸಮರ್ಥ ಮಾಧ್ಯಮ ಎಂದು ಹಿರಿಯ ಕಲಾವಿದೆ ಬಯಲಾಟ ಉಷಾರಾಣಿ ಅಭಿಪ್ರಾಯಪಟ್ಟರು

ನಗರದ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರಕಾರಿ ಪ್ರಥಮ ದರ್ಜೆ (ಸ್ವಾಯತ್ತ ) ಕಾಲೇಜಿನ ಸಭಾಂಗಣದಲ್ಲಿ ನಾಟಕ ವಿಭಾಗದಿಂದ ಆಯೋಜಿಸಿದ್ದ ' ವಿಶ್ವ ರಂಗಭೂಮಿ ದಿನಾಚರಣೆ ' ಹಾಗೂ ಶಿಕ್ಷಣದಲ್ಲಿ ರಂಗಭೂಮಿ ಎನ್ನುವ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ರಂಗಚಟುವಟಿಕೆಗಳನ್ನು ಯುವ ಸಮುದಾಯ ಪ್ರೀತಿಯಿಂದ ಬೆಂಬಲಿಸಬೇಕು ಎಂದ ಅವರು ಬಯಲಾಟ ಕಲಾವಿದೆಯಾದ ತಮಗೆ ರಂಗಭೂಮಿಯ ಸೇವೆ ತೃಪ್ತಿಯನ್ನು ತಂದು ಕೊಟ್ಟಿರುವುದನ್ನು ಸ್ಮರಿಸಿ ರಂಗಗೀತೆಗಳನ್ನು ಹಾಡಿದರು.

ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಯುವ ರಂಗ ಸಂಶೋಧಕ ಜೆ. ದಿವಾಕರ ರಂಗಭೂಮಿಗೂ ಶಿಕ್ಷಣ–ಕ್ಕೂ ಅವಿನಾಭಾವ ಸಂಬಂಧವಿದೆ. ರಂಗಭೂಮಿ ಅಕ್ಷರಸ್ಥರಿಗೂ ಮತ್ತು ಅನಕ್ಷರಸ್ಥರಿಗೂ ಏಕಕಾಲದಲ್ಲಿ ಅರಿವನ್ನು ಉಂಟುಮಾಡುವ ವಿಶಿಷ್ಟ ಮಾಧ್ಯಮವಾಗಿದೆ. ರಂಗಭೂಮಿಯಲ್ಲಿ ಆಂಗಿಕ ಮತ್ತು ವಾಚನ ಭಾಷೆಯಿದೆ. ವಿದ್ಯಾರ್ಥಿಗಳು ಸಂವಹನ ಕಲೆಯನ್ನು ರಂಗಭೂಮಿಯ ಮೂಲಕ ಕರಗತ ಮಾಡಿಕೊಳ್ಳಬಹುದು ಎಂದು ವಿಶ್ಲೇಷಿಸಿದರು. ಮೇಳ, ಹಾಡು, ಕುಣಿತ, ಸಂಭಾಷಣೆ ಎಲ್ಲವೂ ರಂಗಭೂಮಿಯಲ್ಲಿದೆ. ನಾವು ಕಳೆದು ಹೋಗದಂತೆ ಉಳಿಸಿ ಬೆಳೆಸುವ ಶಕ್ತಿ ಇದಕ್ಕಿದೆ. ಇಂತಹ ವಿಷಯವನ್ನು ಪಠ್ಯದಲ್ಲಿ ತರುವ ಕೆಲಸ ಜರೂರಾಗಬೇಕಿದೆ. ಏಕೆಂದರೆ ಪ್ರಾಥಮಿಕ ಶಿಕ್ಷಣದಲ್ಲಿ ನಮ್ಮ ಮಕ್ಕಳು ಮಾತನಾಡದ ಹಾಗೆ ಕಟ್ಟಿ ಹಾಕಲಾಗುತ್ತಿದೆ. ರಂಗ ಶಿಕ್ಷಣ ಇದ್ದರೆ ಪ್ರತಿ ಮಗು ಕ್ರಿಯಾಶೀಲವಾಗಿ ಓಡಾಡಿ ಮಾತನಾಡುತ್ತೆ ಎಂದರು.

ರಂಗಭೂಮಿ ಪ್ರಧಾನವಾಗಿ ತೊಡಗಿಸಿಕೊಳ್ಳುವಿಕೆ, ವಿಮರ್ಶಾತ್ಮಕ ಚಿಂತನೆ, ಸಂವಹನ ಕಲೆ ಹಾಗೂ ಸಹಭಾಗಿತ್ವವನ್ನು ಕಲಿಸಿಕೊಡುತ್ತದೆ ಎಂದು ವಿವರಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ನಾಟಕ ವಿಭಾಗದ ಮುಖ್ಯಸ್ಥ ದಸ್ತಗೀರಸಾಬ್ ದಿನ್ನಿ ಹೊಸ ಬದಲಾವಣೆಗೆ ಸದಾ ತೆರೆದುಕೊಳ್ಳುತ್ತ ಬಂದಿರುವ ಆಧುನಿಕ ಕನ್ನಡ ರಂಗಭೂಮಿಗೆ ದೊಡ್ಡ ಪರಂಪರೆ ಇದೆ. ನವಮಾಧ್ಯಮಗಳ ಕಾಲಘಟ್ಟದಲ್ಲಿ ಅದೀಗ ಅನೇಕ ಬಗೆ–ಯ ಸವಾಲುಗಳನ್ನು ಎದುರಿಸುತ್ತಿದೆ. ಸದಾ ತಾತ್ವಿಕತೆಯನ್ನು ದಾಟಿಸುತ್ತಲೇ ನಮ್ಮನ್ನು ಮನುಷ್ಯರನ್ನಾಗಿಸುವ ಈ ಮಾಧ್ಯಮವನ್ನು ಪ್ರಜ್ಞಾವಂತ ಪ್ರೇಕ್ಷಕರು ಉಳಿಸಿಕೊಳ್ಳಬೇಕಾಗಿದೆ ಎಂದರು. ಹಿರಿಯ ರಂಗಭೂಮಿ ಕಲಾವಿದ ಪುರುಷೋತ್ತಮ ಹಂದ್ಯಾಳು ಮಾತನಾಡಿ ಜನಸಾಮಾನ್ಯರ ನಡುವೆ ಹುಟ್ಟಿ ಬೆಳೆದ ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ಅರಿಯಲು, ಕಲಾವಿದರ ಸೇವೆಯನ್ನು ನೆನಪಿಸಿಕೊಳ್ಳಲು, ರಂಗಭೂಮಿಯನ್ನು ಬಲಪಡಿಸಲು ಇಂತಹ ದಿನಾಚರಣೆಗಳು ಸಹಕಾರಿ ಯಾಗುತ್ತವೆ ಎಂದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹುಚ್ಚೂಸಾಬ್ ಸಂಡೂರು ಸಮಾಜದಲ್ಲಿರುವ ನ್ಯೂನತೆಗಳನ್ನು ಸರಿಪಡಿಸುತ್ತ, ಸಮಸ್ಯೆಗಳ ಬಗೆಗೆ ಹೊಸ ಪ್ರಜ್ಞೆಯನ್ನು ಹುಟ್ಟು ಹಾಕುವ ರಂಗಭೂಮಿಗೆ ಎಂದಿಗೂ ಸಾವಿಲ್ಲ. ಕಾಲಕ್ಕೆ ತಕ್ಕ ಹಾಗೆ ಅನೇಕ ಪಲ್ಲಟಗಳನ್ನು ಹೊಂದಿ ಬೆಳೆಯುತ್ತಿದೆ ಎನ್ನುವುದಕ್ಕೆ ದೇಶದ ಮೂಲೆ ಮೂಲೆಯಲ್ಲಿ ನಡೆಯುತ್ತಿರುವ ರಂಗ ಚಟುವಟಿಕೆಗಳೇ ಜೀವಂತ ಸಾಕ್ಷಿ ಎಂದರು.

ವೇದಿಕೆ ಮೇಲೆ ನಾಟಕ ಅತಿಥಿ ಉಪನ್ಯಾಸಕ ಆರ್.ಪಿ. ಮಂಜುನಾಥ ಇದ್ದರು. ಈ ಸಂದರ್ಭದಲ್ಲಿ ಉಪನ್ಯಾಸಕ ಹನುಮಂತರಾಯ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾರ್ವಜನಿಕರಿಗೆ ಗಣತಿಯಲ್ಲಿ ಭಾಗವಹಿಸಲು ಅವಕಾಶ

• **ಕಲಬುರಗಿ, ಮಲ್ಲಮ್ಮ ನುಡಿ ವಾರ್ತೆ**

ಜನಗಣತಿಯು ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ, ದೇಶದ ಸಾಮಾಜಿಕ–ಆರ್ಥಿಕ ಸ್ಥಿತಿಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು ಭಾರತದ ಮೊದಲ ಡಿಜಿಟಲ್ ಜನಗಣತಿ ಮತ್ತು 16 ನೇ ಜನಗಣತಿಯು ಏಪ್ರಿಲ್ ನಿಂದ 2 ಹಂತದಲ್ಲಿ ಆರಂಭಗೊಳ್ಳಲಿದೆ. ಈ ಜನಗಣತಿಯ ಅಂಗವಾಗಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ–ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದಾಗಿದೆ. ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16 ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ಏಪ್ರಿಲ್ 1 ರಿಂದ 15 ವರೆಗೆ ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ ನೀಡಲಾಗಿದೆ.

ಸಾರ್ವಜನಿಕರು ಸ್ವಯಂ ಗಣತಿ ವೆಬ್ ಪೋರ್ಟಲ್ ಜ.ಛಿಜಟಿಣ.ರಿತ.ುಟಿ ಬಳಸಿಕೊಂಡು ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಆನ್ಲೈನ್ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ದಿನಾಂಕ 01.04.2026 ರಿಂದ 15.04.2026 ವರೆಗೆ ಸ್ವಯಂ ಗಣತಿ ವೆಬ್ ಪೋರ್ಟಲ್ ಲಭ್ಯವಿದ್ದು ಮೊಬೈಲ್, ಡೆಸ್ಕ್ ಟಾಪ್, ಲ್ಯಾಪ್ ಟಾಪ್ ಸಾಧನಗಳ ಮೂಲಕ ನಮೂದಿಸಬಹುದು. ಇದರಿಂದ ಸಮಯದ ಉಳಿತಾಯ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿ ಆಗಲಿದೆ. ಮಾಹಿತಿ ಭರ್ತಿಯ ವೇಳೆ, ಕುಟುಂಬಗಳು ತಮ್ಮ ಸ್ಥಳದ ವಿವರಗಳನ್ನು (ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮ/ಪಟ್ಟಣ/ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. ಸ್ಥಳವನ್ನು ನಿಖರವಾಗಿ ಗುರುತಿಸಲು ಪಿನ್ ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆಯೂ ಇರುತ್ತದೆ. ಸ್ವಯಂ–ಗಣತಿ (Self-Enumeration) ಪೋರ್ಟಲ್ನಲ್ಲಿ ಕೇಳುವ ಪ್ರಶ್ನೆಗಳಿಗೆ ಮನೆಪಟ್ಟಿ ಕಾರ್ಯಾಚರಣೆ ಮೊಬೈಲ್ ಆಪ್ ನಲ್ಲಿರುವಂತೆಯೇ ರೂಪಿಸಲಾಗಿದ್ದು, ಕೆಲವು ಮಾಹಿತಿಗಳು ಪೂರ್ವಭರ್ತಿಯಾಗಿರಬಹುದು. ಸಾರ್ವಜನಿಕರಿಗೆ ಸಹಾಯವಾಗುವಂತೆ ಪದೇ ಪದೇ ಕೇಳುವ ಪ್ರಶ್ನೆಗಳು (ಈಂಕಿ) ಮತ್ತು ಮಾರ್ಗಸೂಚಿಗಳನ್ನೂ ಇದರಲ್ಲಿ ಒದಗಿಸಲಾಗಿದೆ. ಕುಟುಂಬವು ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಅವರಿಗೆ ಒಂದು ವಿಶಿಷ್ಟ ಸ್ವಯಂ–ಗಣತಿ ಐಡಿ (Self-Enumeration ID) ನೀಡಲಾಗುತ್ತದೆ. ಈ ಐಡಿಯನ್ನು ಖಒಖ ಮತ್ತು ಇಮೇಲ್ ಮೂಲಕ ಕಳುಹಿಸಲಾಗುತ್ತದೆ.

# ಅತ್ಯುತ್ತಮ ಸೇವಾ ಪ್ರಶಸ್ತಿಗೆ ಮಂಜು ಹಿರೇಮನಿ ಭಾಜನ



• **ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ**

ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಗ್ರೇಡ್ ಒನ್ ಅಧಿಕಾರಿಣಿ ಮಂಜು ಹಿರೇಮನಿ ಅವರ ಸೇವೆ ಪರಿಗಣಿಸಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ರಾಜ್ಯ ಕ. ಪ. ಶಿ. ಸಂ ಸಂಘವು ಅತ್ಯುತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಯುತರು ಪಟ್ಟಣದ ಸಮಾಜ ಕಲ್ಯಾಣ ಇಲಾಖೆಗೆ 2024 ಆಗಸ್ಟ್ ತಿಂಗಳಲ್ಲಿ ನಿಯೋಜನೆಗೊಂಡ ಅವರ ಇಲಾಖೆಯ ಅತ್ಯಂತ ಮಹತ್ವಕಾಂಕ್ಷಿ ಕಾರ್ಯಕ್ರಮಗಳಾದ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಹಾಜರಾತಿ, ಆಹಾರ ಪಾರದರ್ಶಕತೆ, ಚೇತನ ಸಂಜೆಯ ಮಿಷನ್ ವಿದ್ಯಾಪುರ ಆನ್ಲೈನ್ ತರಗತಿ , ದಿನಚರಿ ವಹಿ ನಿರ್ವಹಣೆ ಇನ್ನಿತರ ಯೋಜನೆಗಳ ಅನುಷ್ಠಾನಗೊಳಿಸುವಲ್ಲಿ ಇಡೀ ಜಿಲ್ಲೆಯಲ್ಲಿಯೇ ಅತ್ಯಂತ ಶ್ರದ್ಧೆ ಹಾಗೂ ಪರಿಶ್ರಮದಿಂದ ಕರ್ತವ್ಯ ನಿರ್ವಹಿಸಿದ ಹಿನ್ನಲೆಯಲ್ಲಿ ಆಯ್ಕೆ ಮಾಡಲಾಗಿದೆ.

ಇತ್ತೀಚಿಗೆ ವಿಜಯಪುರದಲ್ಲಿ ಜರುಗಿದ ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋತದಾರ, ಜಿಲ್ಲಾಧಿಕಾರಿ ಡಾ. ಆನಂದ್ ಕೆ ಸೇರಿದಂತೆ ಅನೇಕ ಗಣ್ಯರು ಪ್ರಶಸ್ತಿ ನೀಡಿ ಶುಭ ಹಾರೈಸಿದರು. ಶ್ರೀಯುತರು ಇತ್ತೀಚೆಗೆ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಕ್ರಿಕೆಟ್ ದಲ್ಲಿ ದ್ವಿತೀಯ ಹಾಗೂ ವಿವಿಧ ವಿನೂತನ ಕಾರ್ಯಕ್ರಮಗಳಲ್ಲಿ ಚಾಂಪಿಯನ್ ಆಗಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಇಲಾಖೆಗೆ ಗೌರವ ತಂದಿದ್ದಾರೆ.

# ಕನ್ನಡ ಭುವನೇಶ್ವರಿ ಸಂಘದಿಂದ ಶ್ರೀರಾಮ ನವಮಿ



• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ವಿಜೃಂಭಣೆಯಿಂದ ಶ್ರೀರಾಮನವಮಿ ಹಬ್ಬವನ್ನ ಆಚರಿಸಿದ ಅನೇಕಲ್ ತಾಲೂಕಿನ ಚಂದಾಪುರ ಸೂರ್ಯ ಎಲಿಗನ್ಸ್ ಅಪಾರ್ಟಮೆಂಟ್ನ ಶ್ರೀ ಕನ್ನಡ ಭುವನೇಶ್ವರಿ ಸಂಘದ ಸದಸ್ಯರು.

ಸಂಘದ ಅಧ್ಯಕ್ಷರಾದ ಪಿ.ರಘುರಾಂ ನೇತೃತ್ವದಲ್ಲಿ ಕಾರ್ಯಾಧ್ಯಕ್ಷ, ಬಾಬುರಾವ್ ಮತ್ತು ಇನ್ನಿತರ ಸದಸ್ಯರು ಮರ್ಯಾದೇ ಪುರುಷೋತ್ತಮನೆಂದೆ ಖ್ಯಾತಿ ಪಡೆದ ಶ್ರೀರಾಮನ ಭಾವಚಿತ್ರಕ್ಕೆ ವಿಶೇಷ ಪೂಜಾ ಅವನಗಳನ್ನ ನೆರವೇರಿಸುವ ಮೂಲಕ ಸೂರ್ಯಾ ಎಲಿಗನ್ಸ್ ಅಪಾರ್ಟ್ ಮೆಂಟನ ಶ್ರೀ ಕನ್ನಡ ಭುವನೇಶ್ವರಿ ಸಂಘದ ಕಾರ್ಯ ಚಟುವಟಿಕೆಗಳಿಗೆ ಅಧಿಕೃತ ಚಾಲನೆ ನೀಡಲಾಯಿತು.

ಇನ್ನು, ರಾಮನವಮಿ ಹಿನ್ನೆಯಲ್ಲಿ, ಅಪಾರ್ಟ್‌ಮೆಂಟನ, ಉಪಾಧ್ಯಕ್ಷರಾದ ಬಿ ಎಂ. ರವಿ ಅವರ ನೇತೃತ್ವದಲ್ಲಿ ಶ್ರೀರಾಮನ ಭಕ್ತಿಗೀತಿಗಳನ್ನ, ನೆರೆದಿದ್ದ ನೂರಾರು ನಿವಾಸಿಗಳಿಗೆ ಪ್ರಸ್ತುತ ಪಡಿಸಿದರು.

ಇದೇ ಸಂದರ್ಭದಲ್ಲಿ, ಕಾರ್ಯದರ್ಶಿ ನರಸಿಂಹಮೂರ್ತಿಯವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳಿಗೆ ಸ್ವಾಗತಿಸಿದರು. ನಂತರ ಮಾತನಾಡಿದ ಅಧ್ಯಕ್ಷರಾದ ರಘುರಾಮ್ ಸಂಘದ ಉದ್ದೇಶ ಮತ್ತು ಗುರಿಗಳ ಬಗ್ಗೆ ವಿವರಿಸಿದರೆ, ಸದಸ್ಯರಾದ ಶ್ರೀಮತಿ ರೂಪಾ ಅವರು ಸಂಘದ ಚಟುವಟಿಕೆಗಳು ಹಾಗು ಉದ್ದೇಶಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿ ಶ್ಲಾಘಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀರಾಮ ನವಮಿಯ ವಿಶೇಷ ಪೂಜೆಯ ನಂತರ ಸಾಕ್ಷಿಯಾದ ನೂರಾರು ನಿವಾಸಿಗಳಿಗೆ ಮತ್ತು ಸರ್ವಸದಸ್ಯರಿಗೆ, ಪಾನಕ, ಮಜ್ಜೆಗೆ, ಕೋಸಂಬರಿ ನೀಡಿ ಸಂಭ್ರಮಿಸಲಾಯಿತು.

ಈ ಸಂದರ್ಭದಲ್ಲಿ, ಖಜಾಂಚಿ, ಜಿ.ಎಸ್. ನಿಂಬಾಳ, ಜಂಟಿಕಾರ್ಯದರ್ಶಿಗಳಾದ, ವೆಂಕಟೇಶ್ವರ ಗಾದಾ, ನಾಗೇಂದ್ರ. ನಿರ್ದೇಶಕರಾದ, ಶ್ರೀನಿವಾಸ ಕುಲಕರ್ಣಿ, ಸಮೀರ್ ಕುಲರ್ಣಿ, ನಾಗಭೂಷಣ್, ದಿಲ್ ಶಾದ್ ಬೇಗಮ್ ಸೇರಿದಂತೆ ಅಪಾರ್ಟ ಮೆಂಟ ನಿವಾಸಿಗಳು ಸರ್ವಸದಸ್ಯರು ಉಪಸ್ಥಿತರಿದ್ದರು.

# ಅಕ್ರಮ ಮದ್ಯ ಮಾರಾಟ ಸ್ಥಗಿತ; ಕ್ರಾಂತಿಕಾರಿ ಕಿಸಾನ್ ಸೇನಾ ಕಾರ್ಯಕ್ಕೆ ಗ್ರಾಮಸ್ಥರ ಮೆಚ್ಚುಗೆ

**ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಇತ್ತೀಚಿನ ದಿನಗಳಲ್ಲಿ ಅಕ್ರಮ ಮಧ್ಯ ಮಾರಾಟ ಹೆಚ್ಚಾಗಿ ಕಂಡುಬರುತ್ತಿದ್ದು ರಾಷ್ಟ್ರೀಯ ಕಿಸಾನ್ ಸೇನಾ ಸಮಿತಿ ಕೆಲವು ಗ್ರಾಮಗಳಲ್ಲಿ ಅಕ್ರಮ ಮಧ್ಯ ಮಾರಾಟವನ್ನು ಸ್ಥಗಿತಗೊಳಿಸಿದ್ದು ಇದರಿಂದ ಸಾರ್ವಜನಿಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.

ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುರಡಿ, ಗೆದಿಗೆರಿ, ಗೆದಿಗೇರಿ ತಾಂಡಾ, ಮಕ್ಕಳಿ, ಹುಲೇಗುಡ್ಡ ಸೇರಿದಂತೆ ಇನ್ನು ಹಲವಾರು ಗ್ರಾಮಗಳಲ್ಲಿ ಅಕ್ರಮ ಮಧ್ಯ ಮಾರಾಟ ವಿಷಯವನ್ನು ತಿಳಿದು ಕಾರ್ಯ ಪ್ರವೃತ್ತರಾದ ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ರಿ ದೆಹಲಿ ಇವರ ವತಿಯಿಂದ ಗ್ರಾಮಸ್ಥರ ಮನವೊಲಿಸಿ ಅಕ್ರಮ ಮಧ್ಯ ಮಾರಾಟಗಾರರನ್ನು ಸಂಪರ್ಕಿಸಿ ಜಾಗೃತಿ ಮೂಡಿಸುವುದರೊಂದಿಗೆ ಗ್ರಾಮದಲ್ಲಿ ಮಧ್ಯಪಾನ ಹಾಗೂ ತಂಬಾಕು ಮುಕ್ತ ಗ್ರಾಮವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ಸಂಘಟನೆಯ ಇಂತಹ ಮಹತ್ವದ ಕಾರ್ಯವನ್ನು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ಹಲವು ಗ್ರಾಮಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಹೆಗ್ಗಿಲ್ಲದೆ ಸಾಗುತ್ತಿದ್ದು ಕಿರಾಣಿ ಅಂಗಡಿ, ಪಾನ್ ಶಾಪ್ ಹಾಗೂ ಮನೆಗಳಲ್ಲಿಯೂ ಸಹ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದು ಇದರಿಂದ ಯುವಕರು, ಬಡ ಕಾರ್ಮಿಕರು, ರೈತರು ಕುಡಿದ ಅವಳಿನಲ್ಲಿ ಅನೇಕ ಕಾನೂನುಬಾಹಿರ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದರು ಇದರಿಂದ ಮನೆ ಗ್ರಾಮದ ಶಾಂತ ಸಮುದ್ರದ ಹಾಳು ಮಾಡುವ ಪರಿಸ್ಥಿತಿ ಉಂಟಾಗುತ್ತಿದ್ದು ಗ್ರಾಮಗಳಲ್ಲಿ ಕಂದಾಯ ಇಲಾಖೆ, ಆರೋಗ್ಯ ಇಲಾಖೆ ಭೇಟಿ ನೀಡುವುದರೊಂದಿಗೆ



ಇನ್ನಿತರ ಹಳ್ಳಿಗಳನ್ನು ಜಾಗೃತಿ ಮೂಡಿಸುವುದರೊಂದಿಗೆ ಡ್ರಗ್ಸ್ ಮತ್ತು ಮಧ್ಯಮುಕ್ತ ಗ್ರಾಮವನ್ನಾಗಿಸಿ ಮಾಡಬೇಕು ಎಂದು ರಾಷ್ಟ್ರೀಯ ಚಿತಾಂ ಸೇನಾ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಗಿದೆ ಎಂದು ಸಂಘಟನೆಯ ಪ್ರಮುಖರು ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ರಾಜ್ಯ ಯುವ ಘಟಕದ ಅಧ್ಯಕ್ಷರು ನವೀದ್ ಪಾಷಾ, ಮುಬಾರಕ್, ಪಿಟ್ಟನಗೌಡ್ರು ಜಿಲ್ಲಾಧ್ಯಕ್ಷರು, ಮರಿಯಪ್ಪ ತಾಲೂಕ ಅಧ್ಯಕ್ಷರು, ಹನುಮಪ್ಪ ನಾಗರಾಳ, ದುರ್ಗಪ್ಪ ಬಂಡ್ಲಿ, ಶರಣಪ್ಪ, ಮರಿಯಪ್ಪ ಬಾವಿಮನಿ, ದ್ಯಾಮಣ್ಣ, ಅಜ್ಜಪ್ಪ, ಶರಣಯ್ಯ, ಕೃಷ್ಣಪ್ಪ, ಭಟ್ರು, ಬಾಳಪ್ಪ ಬಂಡ್ಲಿ, ಹನುಮಗೌಡ ಮಾಲಿ ಪಾಟೀಲ್, ಮುದುಕಪ್ಪ, ಭೀಮಣ್ಣ, ನಿಂಗಮ್ಮ ಕಲ್ಲೂರ್, ದುರ್ಗಪ್ಪ ಹರಿಜನ್, ರಮೇಶ್, ಹಾಲಪ್ಪ, ವಿಜಯಕುಮಾರ್, ಚನ್ನಬಸಯ್ಯ, ಛತ್ರಪ್ಪ, ಬಾಳಪ್ಪ ಕಂಬಳಿ, ಶರಣಪ್ಪ ಕುರಿ, ಮಾರುತಿ ಇನ್ನು ಮುಂದಾದ ಗುರಿ ಹಿರಿಯರು ಯುವಕರು ಉಪಸ್ಥಿತರಿದ್ದರು


# ಭಕ್ತಿಯ ಸಂಭ್ರಮಕ್ಕೆ ಸಾಕ್ಷಿಯಾದ ಶ್ರೀ ಕಲ್ಲಿನಾಥೇಶ್ವರ ಪಂಚ ಕಳಸ ಮಹಾ ರಥೋತ್ಸವ

• ಮಲ್ಲಮ್ಮ ನುಡಿವಾರ್ತೆ ಕುಕನೂರ

ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ನೆಡೆದ ಶ್ರೀ ಕಲ್ಲಿನಾಥೇಶ್ವರ ಪಂಚಕಳಸ ಮಹಾ ರಥೋತ್ಸವ ಅದ್ದೂರಿಯಾಗಿ ಜರುಗಿತು.

ಬೆಳಿಗ್ಗೆ ಶ್ರೀಕಲ್ಲಿನಾಥೇಶ್ವರನಿಗೆ ರುದ್ರಾಭಿಷೇಕ ಬಿಲ್ವಾರ್ಚನೆ,ವಿಶೇಷ ಪೂಜೆ, ನೆರವೇರಿತು. ಗ್ರಾಮದ ಭಕ್ತರೆಲ್ಲರೂ ಆಗಮಿಸಿ ಸ್ವಾಮೀಯ ಪೂಜೆಯಲ್ಲಿ ಪಾಲ್ಗೊಂಡು ಪುನೀತರಾದರು.ಪರಮಪೂಜ್ಯಡಾ. ಮಹಾದೇವ ಮಹಾಸ್ವಾಮಿಗಳು ಪಂಚ ಕಳಸ ಮಹಾರಥೋತ್ಸವಕ್ಕೆಚಾಲನೆ ನೀಡಿದರು.ಸಂಜೆ ವೇಳೆಗೆ ಊರಿನ ಅನೇಕ ಯುವಕರ ಬಳಗ ನೂತನ ರಥೋತ್ಸವಕ್ಕೆ ವಿವಿಧ ಬಗೆಯ ಹೂವಿನ ಹಾರಗಳನ್ನು ಮೆರವಣಿಗೆಯ ಮೂಲಕ ತಂದು ಮಹಾ ರಥೋತ್ಸವಕ್ಕೆ ಅಲಂಕರಿಸಿದರು.

ಭಕ್ತ ಸಮೂಹದ ಮಧ್ಯ ಶ್ರೀ ಕಲ್ಲಿನಾಥೇಶ್ವರನಿಗೆಭಕ್ತಿಯಜಯ ಘೋಷದೊಂದಿಗೆ ಪಲ್ಲಕ್ಕಿಯಲ್ಲಿ ಸ್ವಾಮಿಯ ಮೂರ್ತಿ ಪ್ರತಿಷ್ಠಾಪಿಸಿ ಭಕ್ತರಿಗೆ ಸಾಮೂಹಿಕವಾಗಿ ದರ್ಶನ ಭಾಗ್ಯ ನೀಡಲಾಯಿತು. ಭಕ್ತಿ ಭಾವದಿ ಅದ್ದೂರಿಯಾಗಿ ರಥೋತ್ಸವ ಜರುಗಿತು. ಭಜನೆ,ಡೊಳ್ಳು,ನಂದಿಕೋಲು,ಭಜಂತ್ರಿಮೇಳಗಳ ಮಂಗಳವಾದ್ಯದದಲ್ಲಿ ಶ್ರೀ ಕಲ್ಲಿನಾಥೇಶ್ವರ ಸ್ವಾಮಿಯ ಜಾತ್ರೆಯು ಭಕ್ತಿಗೆ ಸಾಕ್ಷಿಯಾಯಿತು. ಜಾತ್ರಾ ನಿಮಿತ್ತವಾಗಿ ಜರುಗಿದ ಧರ್ಮಸಭೆಯಲ್ಲಿ ಕುಕನೂರಿನ ಅನ್ನದಾನೇಶ್ವರ ಶಾಖಮಠದ ಡಾ.ಮಹದೇವ ಮಹಾಸ್ವಾಮಿಗಳಿಗೆ ಶಿರೂರು ಗ್ರಾಮದ ಸದ್ಭಕ್ತರಿಂದ ತುಲಾಭಾರ ಸೇವೆ , ನೆರವೇರಿತು. ಕಾರ್ಯಕ್ರಮದಲ್ಲಿ ಭಾಗಿಯಾಗಿ ಭಕ್ತರಿಗೆ ಶ್ರೀ ಗಳು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಕಲ್ಲಿನಾಥೇಶ್ವರ ಸೇವಾ ಸಮಿತಿ ಮತ್ತು ಊರಿನ ಗುರುಹಿರಿಯರು ಯುವಕ ಮಿತ್ರರು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



# ತಾಲೂಕಿನಲ್ಲಿ ಅಡುಗೆ ಅನಿಲ ಕೊರತೆಯಿಲ್ಲ

## ಗ್ಯಾಸ್-ಇಂಧನ ಅಭಾವವೆಂದು ಸುಳ್ಳು ಸುದ್ದಿ ಹರಡಿದಲ್ಲಿ ಕಠಿಣ ಕ್ರಮ

-/ ಕೆ.ಆನಂದಶೀಲ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಕಲಬುರಗಿ ನಗರ ಮತ್ತು ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಅಡುಗೆ ಅನಿಲ (ಐಕಲು) ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿದ್ದು, ಗ್ಯಾಸ್ ಮತ್ತು ಇಂಧನ ಅಭಾವವೆಂದು ಸುಳ್ಳು ಸುದ್ದಿ ಹರಡಿದಲ್ಲಿ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಕಲಬುರಗಿ ತಹಶೀಲ್ದಾರ ಕೆ.ಆನಂದಶೀಲ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚಿಗೆ ನಗರದ ತಹಸೀಲ ಕಚೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದ ಗ್ಯಾಸ್ ಏಜೆನ್ಸಿ ವಿತರಕರೊಂದಿಗೆ ನಡೆಸಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರುವ ಅವರು, ತಾಲೂಕಿನಲ್ಲಿ ಮನೆ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳಿಗೆ ಯಾವುದೇ ಕೊರತೆ ಇಲ್ಲ. ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಸುಳ್ಳು ಸುದ್ದಿ ನಂಬಬಾರದು. ಇನ್ನು ಗ್ರಾಹಕರು ಯಾವುದೇ ಕಾರಣಕ್ಕೂ ಗಾಬರಿಗೊಂಡು ಅತಿಯಾಗಿ ಬುಕ್ಕಿಂಗ್ ಸಹ ಮಾಡುವ ಅಗತ್ಯವಿಲ್ಲ ಎಂದಿದ್ದಾರೆ.

ಕೆಲ ಗ್ರಾಹಕರು ಅನಗತ್ಯ ಆತಂಕಗೊಂಡು ಏಕಕಾಲಕ್ಕೆ ಖಗಿಖಖ ಅಥವಾ ಮಿಸ್ಡ್ ಕಾಲ್ ಮೂಲಕ ಬುಕ್ಕಿಂಗ್ ಮಾಡಲು ಪ್ರಯತ್ನಿಸುತ್ತಿರುವುದರಿಂದ ಕರೆಗಳ ಒತ್ತಡದಿಂದ ಸಿಸ್ಟಮ್‌ಗಳಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿವೆ. ಹೀಗಾಗಿ ಪರ್ಯಾಯವಾಗಿ ಖಔಅಐ, ಊಕಅಐ ಮತ್ತು ಃಕಅಐ ಕಂಪನಿಗಳ ವಾಟ್ಸಾಪ್ ಅಥವಾ ಮೊಬೈಲ್ ಆಪ್ ಮೂಲಕ ಗ್ಯಾಸ್ ಬುಕ್ಕಿಂಗ್ ಮಾಡಬಹುದಾಗಿದೆ ಎಂದಿದ್ದಾರೆ.

ಇನ್ನು ಗ್ಯಾಸ್ ಏಜೆನ್ಸಿಗಳ ಮುಂದೆ ಜನರು ಗುಂಪು ಸೇರುವುದರಿಂದ ಏಜೆನ್ಸಿಗಳ ದೈನಂದಿನ ಕೆಲಸಕ್ಕೂ ಅಡಚಣೆ ಉಂಟಾಗುತ್ತಿದೆ. ಗ್ಯಾಸ್ ಏಜೆನ್ಸಿಗಳು ಸಿಲಿಂಡರ್‌ಗಳನ್ನು ಬುಕ್ಕಿಂಗ್ ಆದ್ಯತೆಯ ಮೇರೆಗೆ ಫಿಫೋ ಮಾದರಿಯಲ್ಲಿ (ಮೊದಲು ಬುಕ್ ಮಾಡಿದವರಿಗೆ ಮೊದಲು ಸರಬರಾಜು) ನೇರವಾಗಿ ಗ್ರಾಹಕರ ಮನೆಗೆ ತಲುಪಿಸಲಿದ್ದಾರೆ. ಹೀಗಾಗಿ ಗ್ರಾಹಕರು ಸುಳ್ಳು ವದಂತಿಗಳಿಗೆ ಕಿವಿಗೊಡದೆ ತಾಲೂಕು ಆಡಳಿತದೊಂದಿಗೆ ಸಹಕರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಅಕ್ರಮದಾಸ್ತಾನು ಮಾಡುವಂತಿಲ್ಲ: ಎಲ್.ಪಿ.ಜಿ, ಇಂಧನವನ್ನು ಅಕ್ರಮವಾಗಿ ದಾಸ್ತಾನು ಮಾಡುವುದು ಅಥವಾ ರೀಫಿಲ್ಲಿಂಗ್ ಮಾಡುವವರ ವಿರುದ್ಧ ಅವಶ್ಯಕ ವಸ್ತುಗಳ ಕಾಯ್ದೆ-1955, ಪೆಟ್ರೋಲಿಯಂ ಉತ್ಪನ್ನಗಳ (ಉತ್ಪಾದನೆ, ಸಂಗ್ರಹಣೆ ಮತ್ತು ಪೂರೈಕೆ) ಆದೇಶ-1999 ಹಾಗೂ ಎಲ್‌ಪಿಜಿ (ಸರಬರಾಜು ಮತ್ತು ವಿತರಣೆಯ ನಿಯಂತ್ರಣ) ಆದೇಶ-2000ರನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಹಶೀಲ್ದಾರ ಕೆ.ಆನಂದಶೀಲ ಅವರು ಎಚ್ಚರಿಕೆ ನೀಡಿದ್ದಾರೆ.

ಸಭೆಯಲ್ಲಿ ತಾಲೂಕಿನ ಗ್ಯಾಸ್ ಏಜೆನ್ಸಿಗಳ ಡೀಲರ್‌ಗಳು, ತಹಸೀಲ್ದಾರ ಕಚೇರಿ ಸಿಬ್ಬಂದಿಗಳು ಇದ್ದರು.

# ಚುನಾವಣಾ ಅಭ್ಯರ್ಥಿಗಳ ಖರ್ಚು ವೆಚ್ಚಗಳ ತಪಾಸಣೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ವೆಚ್ಚ ವೀಕ್ಷಕರು ಜನಪ್ರತಿನಿಧಿಗಳ ಕಾಯ್ದೆ 1951 ರ ಕಲಂ 77(1)ರ ಪ್ರಕಾರ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ದೈನಂದಿನ ಖರ್ಚು ವೆಚ್ಚಗಳ ತಪಾಸಣೆಯನ್ನು ನಡೆಸಲಿದ್ದಾರೆ. ಮೊದಲನೇ ತಪಾಸಣೆ ಮಾರ್ಚ 30, ಎರಡನೇ ತಪಾಸಣೆ ಎಪ್ರೀಲ್ 3 ಹಾಗೂ ಮೂರನೇ ತಪಾಸಣೆ ಎಪ್ರೀಲ್ 7 ರಂದು ಮಾಡಲಾಗುತ್ತದೆ. ಸದರಿ ದಿನಗಳಂದು ತಾವು ಚುನಾವಣಾ ಏಜೆಂಟರುಗಳ ಮೂಲಕ ಬಿಳಿ ಬಣ್ಣದ ದೈನಂದಿನ ಖರ್ಚು ವೆಚ್ಚಗಳ ಪುಸ್ತಕ ಭಾಗ-ಎ, ಗುಲಾಬಿ ಬಣ್ಣದ ನಗದು ಪುಸ್ತಕ ಭಾಗ-ಬಿ ಮತ್ತು ಹಳದಿ ಬಣ್ಣದ ಬ್ಯಾಂಕ್ ನಗದು ಪುಸ್ತಕ ಭಾಗ-ಸಿ ಪುಸ್ತಕಗಳನ್ನು ಕಾಲೋಚಿತಗೊಳಿಸಿ ಚುನಾವಣಾಧಿಕಾರಿಗಳ ಕಚೇರಿ ಬಾಗಲಕೋಟೆಯಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ನಡೆಯುವ ಅಭ್ಯರ್ಥಿಗಳ ಲೆಕ್ಕ ಪತ್ರಗಳ ಈ ತಪಾಸಣೆಗೆ ಕಡ್ಡಾಯವಾಗಿ ಹಾಜರಾಗುವಂತೆ ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

# ಗ್ರಾಪಂ ಮಾಜಿ ಅಧ್ಯಕ್ಷನ ಹತ್ಯೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ತಾಲೂಕಿನ ಗದ್ದನಕೇರಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸಂಗಪ್ಪ ನಾಲತ್ತವಾಡ(45) ಅವರನ್ನು ಗದ್ದನಕೇರಿ ಕ್ರಾಸ್ ನಲ್ಲಿ ಶುಕ್ರವಾರ ಸಂಜೆ ಕೊಲೆ ಮಾಡಲಾಗಿದೆ.

ಕಲಾದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಈ ಕೊಲೆ ಜನರಲ್ಲಿ ಆತಂಕ ಸೃಷ್ಟಿಸಿದೆ. ಕಾರಿನಲ್ಲಿ ಬಂದ ದುಷ್ಕರ್ಮಿಗಳು ಸಂಗಪ್ಪ ಅವರ ಮುಖಕ್ಕೆ ಜಜ್ಜಿ ಕೊಲೆ ಮಾಡಿದ್ದಾರೆ. ಸಂಗಪ್ಪ ನಾಲತ್ತವಾಡ ಅವರ ಪತ್ನಿ ಸಹ ಗದ್ದನಕೇರಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದರು.

ಗದ್ದನಕೇರಿ ಕ್ರಾಸ್ ನಲ್ಲಿ ಸಂಗಪ್ಪ ಬಾರೊಂದನ್ನು ಲೀಸ್ ಪಡೆದು ನಡೆಸುತ್ತಿದ್ದರು. ಕೊಲೆಗೆ ಕಾರಣ ತಿಳಿದುಬಂದಿಲ್ಲ. ಘಟನಾ ಸ್ಥಳಕ್ಕೆ ಬೀಳಗಿ ಶಾಸಕ ಜೆ.ಟಿ.ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯೆಲ್, ಡಿವೈಎಸ್ ಪಿ ಗಜಾನನ ಸುತಾರ, ಕಲಾದಗಿ ಪೊಲೀಸರು ಭೇಟಿ ನೀಡಿದ್ದರು.

# ಪರಸ್ಪರ ಹೊಂದಾಣಿಕೆ, ಪ್ರೀತಿ ವಿಶ್ವಾಸವೇ ದಾಂಪತ್ಯ ಜೀವನ :ಮಹಾದೇವ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಇತ್ತೀಚಿನ ದಿನಗಳಲ್ಲಿ ದಂಪತ್ಯ ಜೀವನದಲ್ಲಿ ಬಿರುಕು ಮೂಡುತ್ತಿರುವುದು ಹೆಚ್ಚಾಗಿ ಕಂಡು ಬರುತ್ತಿರುವುದು ವಿಷಾದನೀಯವಾಗಿದ್ದು ಗಂಡ ಹೆಂಡತಿಯರು ಪರಸ್ಪರ ಹೊಂದಾಣಿಕೆ ಜೊತೆಗೆ ಪ್ರೀತಿ ವಿಶ್ವಾಸ ಹೊಂದಿದಾಗ ದಾಂಪತ್ಯ ಜೀವನ ಶಾಶ್ವತವಾಗಿ ಗಟ್ಟಿಯಾಗಿರುತ್ತದೆ ಎಂದು ಕುಕನೂರು ಪಟ್ಟಣದ ಮುಂಡರಗಿ ಶಾಖಾಮಠದ ಪೂಜ್ಯರಾದ ಶ್ರೀ ಮಹಾದೇವ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಬೆಣಕಲ್ ಗ್ರಾಮದಲ್ಲಿ ಶ್ರೀ ಗುಡ್ಡದ ಬಸವೇಶ್ವರ ಹಾಗೂ ಶ್ರೀ ಅನ್ನದಾನೀಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಯಿತು. ಈ ವೇಳೆ ಮಹಾದೇವ ಶ್ರೀಗಳು ಮಾತನಾಡುತ್ತಾ ಪರಸ್ಪರ ನಂಬಿಕೆಯೊಂದಿಗೆ ಸಾಂಗತ್ಯ ಜೀವನ ನಡೆಸುವುದಕ್ಕಾಗಿ ತಮ್ಮನ್ನು ಭಾವೈಕ್ಯತೆಗೆ ಹೆಸರುವಾಸಿಯಾಗಿರುವ ಈ ಗ್ರಾಮದ ಈ ಪುಣ್ಯ ವೇದಿಕೆಯಲ್ಲಿ ವಧು ವರರನ್ನಾಗಿ ಅಲಂಕರಿಸಿ ದಾಂಪತ್ಯ ಜೀವನಕ್ಕೆ ಪಾದರ್ಪಣೆ ಮಾಡಿಸಿರುತ್ತಾರೆ. ಪೂಜ್ಯರು ಹಾಗೂ ಹಲವಾರು ಗ್ರಾಮಸ್ಥರು ಸೇರಿ ತಮ್ಮನ್ನು ಸಂಸಾರಸ್ಥರನ್ನಾಗಿ ಮಾಡಿದ್ದು ಪರಸ್ಪರ ನಂಬಿಕೆ ವಿಶ್ವಾಸವನ್ನು ವಹಿಸಿಕೊಂಡು ಕೊನೆಯ ಉಸಿರಿರುವವರಿಗೆ ದಾಂಪತ್ಯ ಜೀವನ ನಡೆಸಿ ಎಂದು ಹಾರಸಿದರು.

ಜಾತ್ರೆಯ ಅಂಗವಾಗಿ ಮಾರ್ಚ್ 12 ರಿಂದ ಗ್ರಾಮದಲ್ಲಿ ಕಲಬುರ್ಗಿ ಶರಣ ಬಸವೇಶ್ವರ ಪುರಾಣ ಆರಂಭಗೊಂಡು ಶುಕ್ರವಾರ ಲಘು ರಥೋತ್ಸವದೊಂದಿಗೆ ಸಂಪನ್ನಗೊಂಡಿತು. ಜೊತೆಗೆ ಶನಿವಾರ ಸಾಯಂಕಾಲ 5:00 ಗಂಟೆಗೆ ಲಕ್ಷಾಂತರ ಸಂಖ್ಯೆಯ ಭಕ್ತಾದಿಗಳ ಸಮ್ಮುಖದಲ್ಲಿ ಮಹಾರಥೋತ್ಸವ ಸಂಪನ್ನಗೊಂಡಿತು ಮತ್ತು ಮಾರ್ಚ್ 29ರಂದು ಪಲ್ಲಕ್ಕಿ ಉತ್ಸವ ಕಾರ್ಯಕ್ರಮ ನಡೆಯುವುದಾಗಿ ಜಾತ್ರಾಮಹೋತ್ಸವದ ಸಮಿತಿಯವರು ತಿಳಿಸಿರುತ್ತಾರೆ.

ಈ ವೇಳೆಯಲ್ಲಿ ಶ್ರೀಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಚಿದಾನಂದ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿದ್ದು ಗ್ರಾಮದ ಪ್ರಮುಖರು ಪಾಲ್ಗೊಂಡಿದ್ದರು

# ಭಾವೈಕ್ಯತೆಯ ಹಜರತ್ ಸೈಯದ್ ಷಾ ದೂದ್ ಪೀರಾ ಉರುಸು ಆಚರಣೆ

ಮಲ್ಲಮ್ಮ ನುಡಿವಾರ್ತೆ ಮುದಗಲ್



ಇಲ್ಲಿನ ಜೆಸ್ಕಾಂ ಕಚೇರಿ ಹಿಂಬದಿಯಲ್ಲಿರುವ ದೂದ್ ಪೀರಾ ದರ್ಗಾದಲ್ಲಿ ಹಜರತ್ ಸೈಯದ್ ಷಾ ದೂದ್ ಪೀರಾ ಚಸ್ತಿ ಅಲ್ಖಾದ್ರಿ ಅವರ 64ನೇ ವರ್ಷದ ಉರುಸು ಹಾಗೂ ಹಜರತ್ ಸೈಯದ್ ಶಾ ಹುಸೇನಿಪೀರಾ ಖಾದ್ರಿ ಅವರ ಐದನೇ ವರ್ಷದ ಉರುಸು ಆಚರಣೆ ರವಿವಾರ ಜರುಗಿತು. ಶನಿವಾರ ರಾತ್ರಿ ಗಂಧದ ಕಾರ್ಯಕ್ರಮ ಜರುಗಿತು. ದರ್ಗಾದ ಧಾರ್ಮಿಕ ಆಚರಣೆಯ ಕಾರ್ಯಕ್ರಮಗಳು ಮತ್ತು ಎಲ್ಲಾ ಭಕ್ತರ ಸೇವೆಯಿಂದ ಹಿಂದೂ ಮುಸ್ಲಿಂ ಭಾವೈಕ್ಯತೆ ಸಾರುವುದು ಮಾದರಿಯಾಗಿದೆ. ಜಿಯಾರಾತ ಸೋಮವಾರ ಜರುಗುತ್ತದೆ. ಪ್ರಥಮವಾಗಿ ಉರುಸು ಆಚರಣೆ ಪ್ರಾರಂಭಗೊಂಡಾಗಿನಿಂದ ತಪ್ಪದೇ ಪ್ರತಿವರ್ಷ ನಡೆಯುತ್ತಿರುವ ಉರುಸು, ಜಾತಿ ಭೇದ ಮರೆತು ಎಲ್ಲಾ ವರ್ಗದವರ ಪಾಲ್ಗೊಳ್ಳುವಿಕೆಯಲ್ಲಿ 3 ದಿನಗಳವರೆಗೆ ಉರುಸು ನಡೆಯುತ್ತಿದೆ. ಸೈಯದ್ ಶಾ ದೂದ್ ಪೇರ ಖಾದ್ರಿ ಸಜ್ಜದೆ ಮುತುವಲ್ಲಿ ಹಾಗೂ ಸೈಯದ್ ಮುಸಾ ಖಾದ್ರಿ ಬಿರಾದರ್ ಸಜ್ಜಾದೆ ಮತ್ತು ಸೈಯದ್ ಇಸಾ ಖಾದ್ರಿ ಬಿರಾದರ್ ಸಜ್ಜಾದೆ ದರ್ಗಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಿಂದೂ ಮುಸ್ಲಿಂ ಭಾವ್ಯಕ್ಯತೆ ಸಾರುವ ಈ ಉರುಸು ಇಲ್ಲಿವರೆಗೆ ಭಕ್ತಿಭಾವದಿಂದ ನಡೆಯುತ್ತಿದೆ. ಅಧ್ಯಕ್ಷ ಅಮಿರಬೇಗ್ ಉಸ್ತಾದ, ಉಪಾಧ್ಯಕ್ಷ ರಜಬಲಿಟಂಗ್ರಿ, ಕಾರ್ಯದರ್ಶಿ ಅಜ್ಮೀರ್ ಹುಸೇನ್ ಸೇರಿದಂತೆ ವಿವಿಧ ಮುಖಂಡರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗುತ್ತದೆ. ಕಾರ್ಯಕ್ರಮದಲ್ಲಿ ಪಟ್ಟಣ ಸೇರಿದಂತೆ ವಿವಿಧ ಭಾಗದ ಭಕ್ತಾದಿಗಳು ಉಪಸ್ಥಿತರಿದ್ದರು.

# ಕೋಟನೂರ್ ಕಚೇರಿ ಅಭಿವೃದ್ಧಿಗೆ 5 ಲಕ್ಷ ರೂ ಅನುದಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಕೃಷಿ ಪತ್ತಿನ ಸಹಕಾರ ಸಂಘ, ಕೋಟನೂರ್ ಕಚೇರಿ ಅಭಿವೃದ್ಧಿಗಾಗಿ ಸಲ್ಲಿಸಿದ ಮನವಿಗೆ ಸ್ಪಂದಿಸಿದ ಕಲಬುರ್ಗಿ ದಕ್ಷಿಣ ಮತಕ್ಷೇತ್ರದ ಜನಪ್ರಿಯ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು 5 ಲಕ್ಷ ರೂ ಅನುದಾನ ಬಿಡುಗಡೆಗೊಳಿಸುವುದಾಗಿ ಭರವಸೆ ನೀಡಿದ್ದಾರೆ. ಸಂಘದ ಅಧ್ಯಕ್ಷ ಮಲ್ಲಿನಾಥ ಎಸ್. ನಾಗನಹಳ್ಳಿ ಅವರು ಅಧಿಕಾರ ಸ್ವೀಕರಿಸಿದ ದಿನದಿಂದಲೇ ರೈತರ ಪರವಾಗಿ ನಿರಂತರ ಹೋರಾಟ ನಡೆಸುತ್ತಿದ್ದು, ವಿವಿಧ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ರೈತರಿಗೆ ಧೈರ್ಯ ತುಂಬುತ್ತಿದ್ದಾರೆ. 1986ರಿಂದ ಕಾರ್ಯನಿರ್ವಹಿಸುತ್ತಿರುವ ಈ ಸಹಕಾರ ಸಂಘವು ಸುಮಾರು 40 ಗ್ರಾಮಗಳನ್ನು ಒಳಗೊಂಡಿದ್ದು, ಕೃಷಿ ಮತ್ತು ರೈತರ ಅಭಿವೃದ್ಧಿಗಾಗಿ ನಿರಂತರ ಸೇವೆ ಸಲ್ಲಿಸುತ್ತಿದೆ. ಸಂಘದ ವ್ಯಾಪ್ತಿಯಲ್ಲಿ ಕೋಟನೂರ್, ನಾಗನಹಳ್ಳಿ, ರಾಜಾಪುರ, ನಂದಿಕೂರ್, ಸೀತಾನೋರ್, ಕೆಸರಟಗಿ ಸೇರಿದಂತೆ ಹಲವಾರು ಗ್ರಾಮಗಳ ರೈತರು ಸದಸ್ಯರಾಗಿದ್ದಾರೆ. ಕೋಟನೂರ್ ಗ್ರಾಮದಲ್ಲಿರುವ ಸಂಘದ ಕಚೇರಿ ದುರಸ್ತಿಗಾಗಿ ಶಾಸಕರಿಗೆ ಮನವಿ ಮಾಡಲಾಗಿದ್ದು, ರೈತರಿಗೆ ಉತ್ತಮ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ತಕ್ಷಣವೇ 5 ಲಕ್ಷ ಅನುದಾನ ಬಿಡುಗಡೆಗೊಳಿಸುವುದಾಗಿ ಶಾಸಕರು ತಿಳಿಸಿದ್ದಾರೆ. ಈ ಸಹಾಯಕ್ಕಾಗಿ ಸಂಘದ ಅಧ್ಯಕ್ಷ ಮಲ್ಲಿನಾಥ ನಾಗನಹಳ್ಳಿ ಅವರು ರೈತರ ಪರವಾಗಿ ಶಾಸಕರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

# ಮಹಿಳೆ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಹೋರಾಟಕ್ಕೆ ಸಿದ್ಧರಾಗಬೇಕು: ಲಕ್ಷ್ಮಿ ಹೆಬ್ಬಾಳಕರ್



• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಮಹಿಳೆ ಸ್ವಾಭಿಮಾನದ ಪ್ರತಿಕ ಆಕೆ ಎಲ್ಲಾ ಕ್ಷೇತ್ರದಲ್ಲೂ ದಾಪುಗಾಲಿಡುತ್ತಿರುವ ಸಂದರ್ಭದಲ್ಲಿ ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಹೋರಾಟಕ್ಕೆ ಸಿದ್ದರಾಗಬೇಕು ಎಂದು ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಕರೆ ನೀಡಿದರು.

ಪಟ್ಟಣದ ಮಹಾಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು. ಮಹಿಳೆ ಇಂದು ಸಮಾಜದ ಕಟ್ಟುಪಾಡುಗಳನ್ನು ದಾಟಿ ಮುನ್ನುಗ್ಗುತ್ತಿದ್ದಾಳೆ, ಈ ಸಂದರ್ಭದಲ್ಲಿ ಸ್ವಚ್ಛಂದ , ಸ್ವತಂತ್ರವಾಗಿ ಸ್ವಾಭಿಮಾನದ ಜೀವನ ನಡೆಸಲು ಪುರುಷರ ಸಹಕಾರ ಅತ್ಯಗತ್ಯವಾಗಿದೆ, ಇದಕ್ಕೆ ಪೂರಕವಾಗಿ ಪುರುಷ ಸಮಾಜ ಸ್ಪಂದಿಸುತ್ತಿದೆ. ಹಿಂದೆ ಸತಿ ಸಹಗಮನ ಪದ್ದತಿಗೆ ಕೊರಳು ಕೊಡುತ್ತಿದ್ದ ಮಹಿಳೆ, ಈಗ ಅದೇ ಕಟ್ಟುಪಾಡುಗಳಿಗೆ ತಿಲಾಂಜಲಿ ಹೇಳಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಚಾಪು ಮೂಡಿಸುವ ಮಟ್ಟಕ್ಕೆ ಬೆಳೆದು ನಿಂತಿದ್ದಾಳೆ. ನಾನು ಕಿತ್ತೂರು ರಾಣಿ ಚೆನ್ನಮ್ಮನ ವಂಶದವಳು, ಅಂದು ದೇಶ ಹಾಗೂ ರಾಜ್ಯದಲ್ಲಿ ಅದೆಷ್ಟೋ ದೊಡ್ಡ ದೊಡ್ಡ ರಾಜಮನೆತನಗಳು ಇದ್ದರೂ ಬ್ರಿಟಿಷರ ಅನ್ಯಾಯದ ವಿರುದ್ಧ ಹೋರಾಡಲು ಚನ್ನಮ್ಮ ಬರಬೇಕಾಯಿತು, ಸಾವಿತ್ರಿಬಾಯಿ ಫುಲೆ ವಿರುದ್ಧ ಮನುವಾದಿಗಳು ಏನೇ ಪಿತೂರಿ ನಡೆಸಿದರು ಆಕೆ ಸ್ತ್ರೀ ಶಿಕ್ಷಣ ಬಿಡಲಿಲ್ಲ, ಹಾಗಾಗಿ ರಾಣಿ ಚೆನ್ನಮ್ಮ, ಓಬಕ್ಕ, ಹೇಮರೆಡ್ಡಿ ಮಲ್ಲಮ್ಮನ ಛಲವನ್ನು ಮೈಗೂಡಿಸಿಕೊಂಡು ಮುನ್ನುಗ್ಗಬೇಕು. ಉಕ್ಕಿನ ಮಹಿಳೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಮಹಿಳೆಯರ ಪ್ರತೀಕವಾಗಿ ನಮ್ಮ ಮುಂದಿದ್ದಾರೆ. ಒಂದೆಡೆ ಅಗರ್ಭ ಶ್ರೀಮಂತ ಮನೆತನದಲ್ಲಿ ಜನಿಸಿದರೂ ಜೀವನದುದ್ದಕ್ಕೂ ಸಮಾಜಕ್ಕಾಗಿ ಕಳೆದರು. ಅವರು ಮಹಿಳೆಯರಿಗೆ ಸ್ಫೂರ್ತಿದಾಯಕರಾಗಿದ್ದಾರೆ. ಹಾಗೆಯೇ ಕಿತ್ತೂರು ರಾಣಿ ಚನ್ನಮ್ಮ ನಮ್ಮ ಸ್ವಾಭಿಮಾನದ ಪ್ರತೀಕವಾಗಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಲವಾರು ಯೋಜನೆಗಳನ್ನು ತಂದಿದೆ. ರಾಜ್ಯದ 37 ಲಕ್ಷ ಮಕ್ಕಳ ಲಾಲನೆ ಪಾಲನೆ ಮಾಡುತ್ತಿದ್ದು, 15 ಲಕ್ಷ ಬಾಣಂತಿಯರ ಆರೇಕೆ ಮಾಡುತ್ತಿದೆ, ದುರ್ಬಲ ಮಹಿಳೆಯರ ಶ್ರೇಯೆಣಟಿಜಜಜಿಟಜಜ-ಭಿವೃದ್ಧಿಗೆ ಶ್ರಮಿಸುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವ ಧನವನ್ನು ಬಜೆಟ್‌ನಲ್ಲಿ ಹೆಚ್ಚಳ ಮಾಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿಸುವ ಇರಾದೆ ಹೊಂದಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಮತ್ತು ರೈಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಮಾತನಾಡಿ ಎಲ್ಲರ ಜೀವನದಲ್ಲೂ ಮಹಿಳೆ ತಾಯಿಯಾಗಿ, ಮಡದಿಯಾಗಿ, ಅಕ್ಕನಾಗಿ, ತಂಗಿಯಾಗಿ ಮಹತ್ತರವಾದ ಪಾತ್ರವನ್ನು ವಹಿಸುತ್ತಾ ಪ್ರತಿ ಪುರುಷನ ಯಶಸ್ಸಿಗಾಗಿ ಸ್ಫೂರ್ತಿ ತುಂಬುವ ಕೆಲಸ ಮಾಡುತ್ತಾಳೆ. ಇಂಥಹ ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢಗೊಳಿಸುವ ಉದ್ದೇಶದಿಂದ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಮಹಿಳೆಯರ ಬದುಕಿಗೆ ಆಸರೆಯಾಗಿವೆ. 2023 ರ ಚುನಾವಣೆಯ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಮಹಿಳೆಯರನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಈ ಯೋಜನೆಗಳನ್ನು ಜಾರಿಗೆ ತಂದಿದೆ. ಗೃಹಜ್ಯೋತಿ ಯೋಜನೆ, ಗೃಹಲಕ್ಷ್ಮಿ ಯೋಜನೆಯಡಿ ರೂ.2,000 ಹಣ, ಯುವ ಜನತೆಗೆ ಯುವನಿಧಿ, ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದಂತಹ ಯೋಜನೆಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿವೆ. ಇಂತಹ ಕೆಲಸಗಳು ಕಾಂಗ್ರೆಸ್ ಸರ್ಕಾರದ ಮೂಲಕ ಮಾತ್ರ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಅರುಣ್ ಕುಮಾರ್, ಕಾಂಗ್ರೆಸ್ ಮುಖಂಡ ಡಿ.ಟಿ.ಸ್ವಾಮಿ, ಸಿಡಿಪಿಒ ವೀಣಾ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಾಪಂ ಇಒ ಸುನಿಲ್ ಕುಮಾರ್, ಮೈಮುಲ್ ನಿರ್ದೇಶಕ ಪ್ರಕಾಶ್, ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರ ಮಂಡಳಿ ನಿರ್ದೇಶಕ ಸುಂಡವಾಳು ಮಹಾದೇವ್, ಕೆಪಿಸಿಸಿ ಸದಸ್ಯ ಅನಿಲ್ ಕುಮಾರ್, ಕಾಂಗ್ರೆಸ್ ಮುಖಂಡ ರಹಮತ್ ಜಾನ್ ಬಾಬು, ಪರಮೇಶ್, ಬಿ.ಜೆ.ಬಸವರಾಜ್, ಆಯಿತನಹಳ್ಳಿ ಮಹಾದೇವ್, ರವಿಕುಮಾರ್, ಕೆ.ಆರ್.ನಿರೂಪ, ಅನಿತಾ ತೋಟಪ್ಪ ಶೆಟ್ಟಿ, ಸರಸ್ವತಿ, ಮಂಜುಳಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ನಮ್ಮ ದೇಶಕ್ಕೆ ಮಹತ್ತರ ಕೊಡುಗೆ ಕೊಟ್ಟ ಡಾ.ಬಾಬಾ ಸಾಹೇಬ್ ಅಂಬೇಡ್ಕರ್



• ಮಲ್ಲಮ್ಮ ನುಡಿ ವಾರ್ತೆ, ಹಗರಿಬೊಮ್ಮನಹಳ್ಳಿ

ಈ ದೇಶಕ್ಕೆ ಮಹತ್ತರವಾದ ಸಂವಿಧಾನ ನೀಡಿದ ಮಹಾನ್ ವ್ಯಕ್ತಿ ಬಾಬಾ ಸಾಹೇಬ್ ಅಂಬೇಡ್ಕರ್ ರವರ ವೃತ್ತ ನಿರ್ಮಾಣ ಮಾಡುವ ಭಾಗ್ಯ ನನಗೆ ಲಭಿಸಿರುವುದು ನನ್ನ ಜೀವನದ ಅತಿ ಮುಖ್ಯವಾದ ಕನಸು ನನಸಾದ ದಿನ ಇಂದು ಎಂದು ಶಾಸಕ ನೇಮಿರಾಜ ನಾಯ್ಕ್ ಅಭಿಪ್ರಾಯ ವ್ಯಕ್ತಪಡಿಸಿದರು,

ಪಟ್ಟಣದ ರಾಮನಗರದ ಬಸ್ ನಿಲ್ದಾಣದ ಹತ್ತಿರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 35 ಲಕ್ಷ, ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 15 ಲಕ್ಷ, ಒಟ್ಟು 50 ಲಕ್ಷ ರೂಪಾಯಿಗಳ ವೆಚ್ಚದ ಡಾ. ಬಿ ಆರ್ ಅಂಬೇಡ್ಕರ್ ರವರ ವೃತ್ತ ಮತ್ತು ಪುತ್ತಳಿ ನಿರ್ಮಾಣದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಇಂದು ನಾನು ಎರಡನೇ ಬಾರಿಗೆ ಶಾಸಕನಾಗಿ ವಿಧಾನಸೌಧಕ್ಕೆ ಹೋಗಿದ್ದೇನೆಂದರೆ, ಅದು ಬಾಬಾ ಸಾಹೇಬ್ ಅಂಬೇಡ್ಕರ್ ರವರು ಕೊಟ್ಟಿರುವ ಸಂವಿಧಾನದ ಕೊಡುಗೆ ಅಂಥವರ ಪುತ್ತಳಿ ಮತ್ತು ವೃತ್ತ ನಿರ್ಮಾಣ ಮಾಡುವ ಸೇವೆ ದೊರೆತಿರುವುದು ನನ್ನ ಜೀವನದ ಸಾರ್ಥಕತೆಯ ಬದುಕು ಎಂದು ಭಾವಿಸಿದ್ದೇನೆ ಎಂದರು,

ಡಾ, ಬಿ ಆರ್ ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗದ್ದಿಕೇರಿ ದೊಡ್ಡಬಸಪ್ಪ ಮಾತನಾಡಿ ದಲಿತರನ್ನ ಕೇವಲ ಓಟ್ ಬ್ಯಾಂಕಿಗಾಗಿ ಬಳಸಿಕೊಳ್ಳುವ ರಾಜಕಾರಣಿಗಳ ಹತ್ತಿರ 30 ವರ್ಷಗಳಿಂದ ಅಂಬೇಡ್ಕರ್ ಭವನಕ್ಕಾಗಿ ಮತ್ತು ಸರ್ಕಲ್ ಗಾಗಿ ಹೋರಾಟ ಮಾಡಿದ್ದೇವೆ ಆದರೆ 2012ರಲ್ಲಿ ಇದೆ ನೇಮಿರಾಜ್ ನಾಯ್ಕ್ ರವರು ಭವನಕ್ಕೆ ಭೂಮಿ ಪೂಜೆ ಮಾಡಿದ್ದರು, ಅಂಬೇಡ್ಕರ್ ರವರ ಸರ್ಕಲ್ ಗೂ ನಾಮಫಲಕ ಹಾಕಿದ್ದರು, ಈಗ ಇದೆ ನೇಮಿರಾಜ್ ನಾಯ್ಕ್ ರವರು ವೃತ್ತ ನಿರ್ಮಾಣ ಮತ್ತು ಪುತ್ತಳಿ ಸ್ಥಾಪನೆಯ ಕಾಮಗಾರಿಗೆ ಇಂದು ಚಾಲನೆ ನೀಡಿರುವುದು ಶ್ಲಾಘನೀಯ ಕಾರ್ಯ, ಚುನಾವಣೆ ಬಂದಾಗ ರಾಜ-ಕಾರಣ ಮಾಡೋಣ, ಚುನಾವಣೆ ನಂತರ ಅಭಿವೃದ್ಧಿ ಕಡೆ ಸಾಗೋಣ, ಎನ್ನುವ ಮಾತಿನಂತೆ ಹಾಲಿ ಶಾಸಕರು ನಡೆದುಕೊಳ್ಳುತ್ತಿರುವುದು ಅಭಿನಂದನೆಯ ಕೆಲಸ ಎಂದರು,

ಈ ಸಂದರ್ಭದಲ್ಲಿ ಕನ್ನಿಹಳ್ಳಿ ಚಂದ್ರಶೇಖರ್, ಹೋಟೆಲ್ ಸಿದ್ದರಾಜು, ಹುಳ್ಳಿ ಪ್ರಕಾಶ್, ಪಾಂಡುನಾಯ್ಕ, ಮೇದಾರ್ ಕೊಟ್ರೇಶ್, ನಿವೃತ್ತ ಶಿಕ್ಷಕರಾದ ಮಾಯಪ್ಪ, ಕೊಟ್ರಪ್ಪ, ನಿವೃತ್ತ ಎಎ

ಸಿದ್ದಲಿಂಗಪ್ಪ, ನಿವೃತ್ತ ಸಬ್ ರಿಜಿಸ್ಟರ್ ರುದ್ರಪ್ಪ, ಮುಖಂಡರಾದ ಕೆಚ್ಚಿನಬಂಡಿ ದುರುಗಪ್ಪ, ಯಡ್ರಾಮ್ನಳ್ಳಿ ಮರಿಯಪ್ಪ, ಬ್ಯಾಲಾಳು ಮಂಜುನಾಥ, ಲೋಕಪ್ಪ, ಕೆಂಚಪ್ಪ, ಗೋಣಿಬಸಪ್ಪ, ಫಕೀರಪ್ಪ, ಮಹೇಶ್, ಕಲ್ಲಳ್ಳಿ ನಾಗರಾಜ್, ಮದ್ದಾನಪ್ಪ, ಆನಂದಳ್ಳಿ ಪ್ರಭಾಕರ್, ಚಿಂತ್ರಪಳ್ಳಿ ರಮೇಶ್, ಮೇಘರಾಜ್, ಸೊಬಟಿ ಬಸವರಾಜ್, ಕೋಟೆಪ್ಪ ಇತರರು ಇದ್ದರು

# ಮುತ್ಯಾಲಮ್ಮ ದೇವಿ ದೀಪೋತ್ಸವ, ರಥೋತ್ಸವ

**ಬೆಂಗಳೂರು:** ಶಿವಾಜಿನಗರದ ಸೆಪಿಂಗ್ಸ್ ರಸ್ತೆಯಲ್ಲಿರುವ ಪ್ರಸಿದ್ಧ ಶ್ರೀ ಮುತ್ಯಾಲಮ್ಮ ದೇವಾಲಯದ ರಥೋತ್ಸವ ಹಾಗೂ ದೀಪೋತ್ಸವ ಮಾರ್ಚ್ 31 ಹಾಗೂ ಏಪ್ರಿಲ್ ಒಂದರಂದು ನಡೆಯಲಿದೆ.



ರಥೋತ್ಸವ ಕಾರ್ಯಕ್ರಮಗಳಿಗೆ ಮಾರ್ಚ್ 24 ರಂದು ವನ ಭೋಜನ ದೊಂದಿಗೆ ಚಾಲನೆ ದೊ-ರೆತಿದ್ದು, ಏಪ್ರಿಲ್ 8 ರಂದು ಶಯನೋತ್ಸವ ದೊಂದಿಗೆ ಮುಗಿಯಲಿದೆ.

ಪ್ರಮುಖವಾಗಿ ಮಾರ್ಚ್ 31 ಮಂಗಳವಾರ ದಂದು ದೀಪೋತ್ಸವ ಹಾಗೂ ಏಪ್ರಿಲ್ 1 ಬುಧವಾರ ದಂದು ರಥೋತ್ಸವ ನಡೆಯಲಿದ್ದು, ಸಹಸ್ರಾರು ಭಕ್ತರು ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ ತುಮಕೂರು, ಮೈಸೂರು, ಬೆಂಗಳೂರು ಗ್ರಾಮಾಂತರ ಸೇರಿದಂತೆ ಸುತ್ತಮುತ್ತ ಜಿಲ್ಲೆಗಳಿಂದ ಭಾಗವಹಿಸಲಿದ್ದಾರೆ ಎಂದು ಧರ್ಮ ಕರ್ತ ಜೆ. ಆರ್. ನಾಗರಾಜ್, ಅಧ್ಯಕ್ಷ ಪಟೇಲ್ ಎನ್. ರವಿಕುಮಾರ್, ಪ್ರಧಾನ ಅರ್ಚಕ ಡಾಕ್ಟರ್ ಆರ್. ಸುಬ್ರಮಣಿ, ಪದಾಧಿಕಾರಿಗಳು ಹಾಗೂ ನಿರ್ದೇಶಕರು ತಿಳಿಸಿದ್ದಾರೆ.



ಯುಗಾದಿ ಸಂಚಿಕೆ ಸಂಚಿಕೆಗಾಗಿ ಜಾಹೀರಾತು ನೀಡಿ ಸಹಕಾರ ನೀಡಿದ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಸಿಬ್ಬಂದಿಗೆ ಸಂಚಿಕೆ ನೀಡಿ ಧನ್ಯವಾದ ತಿಳಿಸಲಾಯಿತು.



ಗುರುಮಠಕಲ್ ಶಾಸಕರಾದ ಶ್ರೀ ಶರಣಗೌಡ ಕಂದಕೂರ ಅವರು ಮಲ್ಲಮ್ಮ ನುಡಿ ಯುಗಾದಿ ಸಂಚಿಕೆಗೆ ಶುಭಕೋರಿದರು.



ಅನೌಪಚಾರಿಕ ಶಿಕ್ಷಣ ಸಂಸ್ಥೆ ವಿಜಯಪುರ ವಿಜಯಪುರ ನಗರ ಸ್ಲಂ ಮಹಿಳಾ ಸ್ವ ಸಹಾಯ ಸಂಘಗಳ ಒಕ್ಕೂಟದಿಂದ ಮಹಿಳೋತ್ಸವ ಆಚರಿಸಿ ಸಂಭ್ರಮಿಸಿದ ಮಹಿಳಾ ಮುನಿಗಳು..

# ಭಾರತದ ತುರ್ತು ಚಿಕಿತ್ಸಾ ಕ್ಷೇತ್ರಕ್ಕೆ ಹೊಸ ಚೈತನ್ಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಆರ್ಥೋಪೆಡಿಕ್ಸ್ ಮತ್ತು ಟ್ರಾಮಾ ಕೇರ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ವೈದ್ಯಕೀಯ ಸಂಸ್ಥೆ ಹೊಸ್ಮಟ್ ಆಸ್ಪತ್ರೆಯು ಬೆಂಗಳೂರು ಆರ್ಥೋಪೆಡಿಕ್ ಸೊಸೈಟಿಯ ಸಹಯೋಗದೊಂದಿಗೆ ಮೊಟ್ಟಮೊದಲ ಬಾರಿಗೆ ಹಮ್ಮಿಕೊಂಡಿದ್ದ 'ಹೊಸ್ಮಟ್ ಟ್ರಾಮಾಕಾನ್ 2026' ಸಮಾವೇಶದಲ್ಲಿ ತನ್ನ ವಿನೂತನ 'ಗೋಲ್ಡನ್ ಅವರ್ ನೆಟ್ ವರ್ಕ್' ಯೋಜನೆಗೆ ಅಧಿಕೃತ ಚಾಲನೆವಾಗಿ ನೀಡಿದೆ. ಈ ಮೂಲಕ ದೇಶದ ತುರ್ತು ಚಿಕಿತ್ಸಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯೊಂದನ್ನು ಇಟ್ಟಿದೆ.

ಈ ವಿಶಿಷ್ಟ ಸಮಾವೇಶದಲ್ಲಿ ಭಾರತದ ತುರ್ತು ಚಿಕಿತ್ಸಾ ಕ್ಷೇತ್ರದ ಇತಿಹಾಸದಲ್ಲೇ ಮೊದಲ ಬಾರಿಗೆ ಅಭ್ಯಾಸ-ಆಧಾರಿತ ಪದ್ಧತಿಗಳ ಕುರಿತು ಸಂವಾದ ನಡೆಸಲಾಯಿತು. ಇದೇ ಸಂದರ್ಭದಲ್ಲಿ 'ಹೊಸ್ಮಟ್ ಅಲುಮ್ನಿ ಅಸೋಸಿಯೇಷನ್' ಅನ್ನು ಸಹ ಉದ್ಘಾಟಿಸಲಾಯಿತು.

ಅಪಘಾತ ಸಂಭವಿಸಿದ ಮೊದಲ ಒಂದು ಗಂಟೆ (ಗೋಲ್ಡನ್ ಅವರ್) ಜೀವ ಉಳಿಸುವಲ್ಲಿ ಅತ್ಯಂತ ನಿರ್ಣಾಯಕ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿರುವ ಗೋಲ್ಡನ್ ಅವರ್ ನೆಟ್ ವರ್ಕ್, ಹೊಸ್ಮಟ್ ಸಂಸ್ಥೆಯಲ್ಲಿ ತರಬೇತಿ ಪಡೆದ ಪರಿಣತ ಶಸ್ತ್ರಚಿಕಿತ್ಸಕರನ್ನು ಒಂದೇ ಸೂರಿನಡಿ ಒಗ್ಗೂಡಿಸಲಿದೆ.



ಅದರ ಜೊತೆಗೆ ಆರಂಭಗೊಂಡಿರುವ 'ಹೊಸ್ಮಟ್ ಅಲುಮ್ನಿ ಅಸೋಸಿಯೇಷನ್' ಕೇವಲ ಹಳೆಯ ವಿದ್ಯಾರ್ಥಿಗಳ ಒಕ್ಕೂಟವಾಗಿರದೆ, ಗೋಲ್ಡನ್ ಅವರ್ ನೆಟ್ ವರ್ಕ್ ವೈದ್ಯಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳ ಜಂಟಿ ಆಡಳಿತಾತ್ಮಕ ಜಾಲವಾಗಿ ರೂಪಿತವಾಗಿದೆ. ಇದು ಪ್ರತಿ ತಿಂಗಳು ಕ್ಲಿನಿಕಲ್ ರೌಂಡ್ಸ್, ಪ್ರತಿ ಮೂರು ತಿಂಗಳಿಗೊಮ್ಮೆ ವಿಶೇಷ ಚಿಕಿತ್ಸಾ ಪದ್ಧತಿಗಳ ಕುರಿತ ಚರ್ಚೆಗಳು ಮತ್ತು ವಾರ್ಷಿಕವಾಗಿ 'ಟ್ರಾಮಾಕಾನ್' ಎಂಬ ಬೃಹತ್ ಸಮಾವೇಶದಂತಹ ನಿಗದಿತ ಕಾರ್ಯಕ್ರಮಗಳನ್ನು ಆಯೋಜಿಸಲಿದೆ. ಅಪಘಾತ ಅಥವಾ ಗಾಯಗೊಂಡ ನಂತರದ ಮೊದಲ ಒಂದು ಗಂಟೆ ಆ ವ್ಯಕ್ತಿಗಳ ಬದುಕುಳಿಯುವ ಸಾಧ್ಯತೆಯನ್ನು ನಿರ್ಧರಿಸುವ ನಿರ್ಣಾಯಕ "ಗೋಲ್ಡನ್ ಅವರ್" ಆಗಿದೆ. ಹಾಗಾಗಿ ಆ ಹೆಸರನ್ನೇ ಈ ನೆಟ್ ವರ್ಕ್ ಗೆ ಇಡಲಾಗಿದೆ. ಈ ನೆಟ್ ವರ್ಕ್, ತುರ್ತು ಚಿಕಿತ್ಸೆ ಎಂಬುದು ಕೇವಲ ಆಸ್ಪತ್ರೆ ಅಥವಾ ಸಂಸ್ಥೆಗಳಿಗೆ ಸೀಮಿತವಾದುದಲ್ಲ; ಬದಲಿಗೆ ಚಿಕಿತ್ಸೆ ನೀಡುವ ವೈದ್ಯರ ತುರ್ತು ಪ್ರಜ್ಞೆ, ನಿಖರತೆ ಮತ್ತು ಸಾಮೂಹಿಕ ಜವಾಬ್ದಾರಿಯ ಮೇಲೆ ನಿಂತಿದೆ ಎಂಬ ತತ್ವವನ್ನು ಸಾರುತ್ತದೆ. ಬರುವ ಆರು ತಿಂಗಳಲ್ಲಿ ಈ ನೆಟ್ ವರ್ಕ್ ತನ್ನ ಆಡಳಿತಾತ್ಮಕ ರಚನೆಯನ್ನು ಅಂತಿಮಗೊಳಿಸಲಿದೆ. ಹಿರಿಯ ಹಳೆಯ ವಿದ್ಯಾರ್ಥಿಗಳನ್ನು ಈ ತಂಡಕ್ಕೆ ಸೇರಿಸಿಕೊಳ್ಳುವ ಮೂಲಕ ತನ್ನ ಮೊದಲ ಹಂತದ ವೈದ್ಯಕೀಯ ಚಟುವಟಿಕೆಗಳನ್ನು ಆರಂಭಿಸಲಿದೆ.

ಜಿಎಚ್ಎನ್ ಆರಂಭವು ಹೊಸ್ಮಟ್ ಆಸ್ಪತ್ರೆಯ ಬೆಳವಣಿಗೆ ಪಥದಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಕೇವಲ ಅತಿ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡುವ ಸಂಸ್ಥೆಯಾಗಿ ಉಳಿಯದೆ, ಆರ್ಥೋಪೆಡಿಕ್ಸ್ (ಮೂಳೆಚಿಕಿತ್ಸೆ) ಮತ್ತು ಟ್ರಾಮಾ ಕೇರ್ (ತುರ್ತು ಚಿಕಿತ್ಸಾ) ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಶ್ರೇಷ್ಠತೆಯ ಕೇಂದ್ರವಾಗಿ ಹೊಸ್ಮಟ್ ಹೊರಹೊಮ್ಮುತ್ತಿರುವುದಕ್ಕೆ ಇದು ಪುರಾವೆಯಾಗಿದೆ.

ಕಳೆದ 33ಕ್ಕೂ ಹೆಚ್ಚು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಹೊಸ್ಮಟ್ ಆಸ್ಪತ್ರೆಯು ದೇಶದಲ್ಲಿ ಅತ್ಯಂತ ಗಮನಾರ್ಹ ಟ್ರಾಮಾ ಕೇರ್ ವಿಭಾಗವನ್ನು ನಿರ್ಮಿಸುತ್ತಾ ಬಂದಿದೆ. ಇಲ್ಲಿ ಪ್ರತಿದಿನ ಸರಾಸರಿ 25 ರಿಂದ 30 ತುರ್ತು ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದು, ಇದು ಭಾರತದ ಅತಿ ಹೆಚ್ಚು ಕಾರ್ಯಚಟುವಟಿಕೆ ಹೊಂದಿರುವ ತುರ್ತು ಚಿಕಿತ್ಸಾ ಕೇಂದ್ರಗಳಲ್ಲಿ ಒಂದಾಗಿದೆ. ಶೈಕ್ಷಣಿಕ ವೈದ್ಯಕೀಯ ಕ್ಷೇತ್ರಕ್ಕೂ ಸಂಸ್ಥೆಯು ಅಪಾರ ಕೊಡುಗೆ ನೀಡಿದ್ದು, ಈವರೆಗೆ 300ಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳನ್ನು ಕೈಗೊಂಡಿದೆ. ಅಂತಾರಾಷ್ಟ್ರೀಯ ಇಂಡೆಕ್ಸ್ಡ್ ಜರ್ನಲ್ ಗಳಲ್ಲಿ 80ಕ್ಕೂ ಹೆಚ್ಚು ಪ್ರಬಂಧಗಳು ಪ್ರಕಟವಾಗಿದ್ದು, ಮೂಳೆಚಿಕಿತ್ಸೆ ಮತ್ತು ಟ್ರಾಮಾ ಕೇರ್ ನ ವೈದ್ಯಕೀಯ ಪದ್ಧತಿಗಳನ್ನು ರೂಪಿಸುವಲ್ಲಿ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿದೆ.

ವೈದ್ಯಕೀಯ ಶಿಕ್ಷಣದ ಮೇಲೂ ಈ ಸಂಸ್ಥೆಯ ಪ್ರಭಾವ ಅಷ್ಟೇ ಮಹತ್ವದ್ದಾಗಿದೆ. ಆರ್ಥೋಪೆಡಿಕ್ ಸೊಸೈಟಿ ಆಫ್ ಇಂಡಿಯಾದ ಅಂದಾಜಿನ ಪ್ರಕಾರ, ಬೆಂಗಳೂರಿನ ಸುಮಾರು 10% ರಷ್ಟು ಮೂಳೆ ಶಸ್ತ್ರಚಿಕಿತ್ಸಕರು ಹೊಸ್ಮಟ್ ನಲ್ಲಿ ತರಬೇತಿ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿದೆ.

# DVPಯಿಂದ ಕ್ರಿಕೆಟ್; ಕ್ರೀಡಾ ಸ್ಫೂರ್ತಿ ಮೆರೆಯೋಣ



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜೀವನದಲ್ಲಿ ಸೋಲು ಗೆಲುವು ಹೇಗೆ ನಡೆ-ಯುತ್ತಿದೆಯೂ ಹಾಗೆ ಕ್ರೀಡಾ ಕ್ಷೇತ್ರದಲ್ಲಿಯೂ ಸೋಲು ಗೆಲುವು ನಡೆಯುತ್ತಿರುತ್ತದೆ. ಸೋಲು ಗೆಲುವಿನ ನಡುವೆ ಕ್ರೀಡಾ ಸ್ಫೂರ್ತಿ ಮೆರೆಯೋಣ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ ಹೇಳಿದರು.

ಈ ವೇಳೆ ದಲಿತ ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾ ಸಹ ಸಂಚಾಲಕ ಮಹಾದೇವ ಚಲವಾದಿ, ನಗರ ಘಟಕದ ಸಂಚಾಲಕ ಹುಚ್ಚಪ್ಪ ಬಾವಿಮನಿ, ಮುಖಂಡರಾದ ಶಂಕರ ಬಸರಗಿ, ಯುವರಾಜ್ ಓಲೇಕಾರ್, ಸಂದೇಶ ಕುಮಟ್ಟಗಿ, ಆಕಾಶ್ ಮಾದರ್, ಆದಿತ್ಯ ಅಲ್ಲದೇ ವಿವಿಧ ವಸತಿ ನಿಲಯದಿಂದ ಬಂದಿದೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕ್ರೈಸ್ತ ಬಾಂಧವರಿಂದ ಪಾಮ್ ಸಂಡೆ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಯೇಸುಕ್ರಿಸ್ತರು ಜೆರುಸಲೇಂ ನಗರವನ್ನು ಪ್ರವೇಶಿಸಿದ ಸಂಕೇತವಾಗಿ ಕ್ರೈಸ್ತ ಬಾಂಧವರು ಆಚರಿಸುವ ಗರಿಗಳ ರವಿವಾರ (ಪಾಮ್ ಸಂಡೆ)ಯನ್ನು ಹಗರಿಬೊಮ್ಮನಹಳ್ಳಿ ಪಟ್ಟಣ, ತಾಲೂಕದ್ಯಂತ ಕ್ರೈಸ್ತರು ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು. ಈ ಮೂಲಕ ಕ್ರೈಸ್ತರ 'ಪವಿತ್ರ ವಾರ'ಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಹಗರಿಬೊಮ್ಮನಹಳ್ಳಿ ಎಬಿನೇಜರ್ ಚರ್ಚ್, ಮರಿಯಮ್ಮನಹಳ್ಳಿ ಕರ್ನಾಟಕ ಕಲ್ವರಿ ಚರ್ಚ್ ಗ ಳಲ್ಲಿ ಫಾಮ್ ಸಂಡೆ ಸಂಡೆ ಪ್ರತ್ಯೇಕ ಪ್ರಾರ್ಥನೆಗಳು ನೆರವೇರಿಸಿದರು.

ತಾಳೆ ಗರಿಗಳನ್ನು ಆಶೀರ್ವದಿಸಿ, ಭಕ್ತರ ಜತೆ ಮೆರವಣಿಗೆಯಲ್ಲಿ ಸಾಗುವ ಮೂಲಕ ಯೇಸುವಿನ ಜೆರುಸಲೇಂ ಪ್ರವೇಶವನ್ನು ಸ್ಮರಿಸಿದರು. ಹಗರಿಬೊಮ್ಮನಹಳ್ಳಿ ಎಬಿನೇಜರ್ ಸಭಾ ಪಾಲಕರು ಪಾಸ್ಟರ್ ವಿಜಯ್ ಭಾಸ್ಕರ್, ಮರಿಯಮ್ಮನಹಳ್ಳಿ ಕರ್ನಾಟಕ ಕಲ್ಬರಿ ಚರ್ಚ್




ಸಭಾ ಪಾಲಕರು ರೆವೆರೆಂಡ್ ಎಂ. ಜಕ್ಕಯ್ಯ ಅವರವರ ಚರ್ಚೆಗಳಲ್ಲಿ ಗರಿಗಳ ರವಿವಾರದ ಬಗ್ಗೆ ವಿವರಿಸದರು. ಗರಿಗಳ ರವಿವಾರ ಕೇವಲ ಒಂದು ಆಚರಣೆಯಲ್ಲ. ಬದಲಾಗಿ ಯೇಸುವಿನ ತ್ಯಾಗದ ಪಯಣದಲ್ಲಿ ಅವರೊಂದಿಗೆ ಸಾಗುವ ಆಮಂತ್ರಣವಾಗಿದೆ. ಕೈಯ್ಯಲ್ಲಿರುವ ಗರಿಗಳು ನಮ್ಮ ಹೃದಯವೆಂಬ ಜೆರುಸಲೇಮ್ಗೆ ಕ್ರಿಸ್ತನನ್ನು ಸ್ವಾಗತಿಸಲು ನಾವು ಸಿದ್ಧ ಎಂಬುದನ್ನು ಸೂಚಿಸುತ್ತದೆ ಎಂದರು.


# ಭಕ್ತಿಯ ಪರಾಕಾಷ್ಠೆ: ಮುಧೋಳದ ಶ್ರೀ ಮಹಾದೇವ ಮಂದಿರದಲ್ಲಿ ವೈಭವದ ಬಾರ್ಶಿ ಹಬ್ಬ ಮತ್ತು ಶಿವ-ಪಾರ್ವತಿ ಕಲ್ಯಾಣ



ವಿಶೇಷ ವರದಿ
● ಪರಮೇಶ ರಾಂಪುರೆ
ಬೀದರ









**ಕಮಲನಗರ:** ತಾಲೂಕಿನ ಐತಿಹಾಸಿಕ ಹಿನ್ನೆಲೆ ಹೊಂದಿರುವ ಮುಧೋಳ (ಬಿ) ಗ್ರಾಮದಲ್ಲಿ ಪ್ರತಿ ವರ್ಷ "ಬಾರ್ಶಿ ಹಬ್ಬ" ಹಾಗೂ ಮಹಾದೇವನ ಜಾತ್ರಾ ಮಹೋತ್ಸವವು ಅತ್ಯಂತ ಸಡಗರ-ಸಂಭ್ರಮದಿಂದ ಜರುಗುತ್ತಿದೆ.

ನೂರಾರು ವರ್ಷಗಳ ಇತಿಹಾಸವಿರುವ ಈ ಧಾರ್ಮಿಕ ಆಚರಣೆಯು ಇಡೀ ಗ್ರಾಮವನ್ನೇ ಭಕ್ತಿಯ ಸಾಗರದಲ್ಲಿ ಮುಳುಗಿಸಿದೆ.

**ಐತಿಹಾಸಿಕ ಹಿನ್ನೆಲೆ ಮತ್ತು ಪರಂಪರೆ:** ಈ ಜಾತ್ರೆಗೆ ಶತಮಾನಗಳ ಇತಿಹಾಸವಿದೆ. ಗ್ರಾಮದ ಚರಮೂರ್ತಿ ಮಠದ ಅಂದಿನ ಪೀಠಾಧಿಪತಿಗಳಾದ ಶ್ರೀ ಶಿವಲಿಂಗ ಮಹಾಸ್ವಾಮಿಗಳು ಈ ಜಾತ್ರೆಯ ರೂಪರೇಷೆಗಳನ್ನು ಸಿದ್ಧಪಡಿಸಿ, ಧಾರ್ಮಿಕ ಜಾಗೃತಿಯನ್ನು ಮೂಡಿಸಿದ್ದರು. ಅಂದಿನಿಂದ ನಡೆದು ಬಂದ ಈ ಪರಂಪರೆಯನ್ನು ಇಂದಿಗೂ ಚರಮೂರ್ತಿ ಮಠದ ಪೀಠಾಧಿಪತಿಗಳಾದ ಶ್ರೀ ವೈಜೀನಾಥ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ಮತ್ತು ಅದ್ದೂ-ರಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.

**ವಾಸ್ತುಶಿಲ್ಪದ ವೈಭವ: ಕಣ್ಮನ ಸೆಳೆಯುವ ಮಂದಿರ:** ಮುಧೋಳದ ಶ್ರೀ ಮಹಾದೇವ ಮಂದಿರವು ಚಾಲುಕ್ಯ ಶೈಲಿಯ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿದೆ.

**ಗರ್ಭಗುಡಿ:** ಇಲ್ಲಿನ ಪುರಾತನ ಶಿವಲಿಂಗ ಹಾಗೂ ಸುಂದರವಾದ ಮಹಾದೇವನ ಮೂರ್ತಿಗೆ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿದ್ದು, ಭಕ್ತರ ಕಣ್ಮನ ಸೆಳೆಯುತ್ತಿದೆ.

**ಮುಖ್ಯದ್ವಾರ:** ಪಶ್ಚಿಮಾಭಿಮುಖವಾಗಿರುವ ಕಲ್ಲಿನ ಕೆತ್ತನೆಯ ಮಹಾದ್ವಾರವು ಭವ್ಯವಾಗಿದೆ. ಕೆಂಪು ಬಣ್ಣ ಮಂದಿರದ ಶೋಭೆಯನ್ನು ಹೆಚ್ಚಿಸಿದೆ.

**ಜಲ ಕುಂಡ:** ಮಂದಿರದ ಮುಂಭಾಗದಲ್ಲಿರುವ ವಿಶಾಲವಾದ ನೀರಿನ ಕುಂಡದಲ್ಲಿ ವರ್ಷದ 12 ತಿಂಗಳು ನೀರು ತುಂಬಿರುವುದು ಇಲ್ಲಿನ ವಿಶೇಷ ಮತ್ತು ಪಾವಿತ್ರ್ಯತೆಯ ಸಂಕೇತವಾಗಿದೆ.

**15 ದಿನಗಳ ಕಾಲ ಧರ್ಮದ ಜ್ಞಾನದಾಸೋಹ:** ಈ ಜಾತ್ರೆಯು ಕೇವಲ ಒಂದು ದಿನಕ್ಕೆ ಸೀಮಿತವಾಗಿಲ್ಲ. ಸತತ 15 ದಿನಗಳ ಕಾಲ ನಡೆಯುವ ಈ ಮಹೋತ್ಸವದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ:

**ಅಖಂಡ ಹರಿನಾಮ ಸಪ್ತಾಹ:** ಏಳು ದಿನಗಳ ಕಾಲ ನಿರಂತರ ಹರಿನಾಮ ಸ್ಮರಣೆಯ ಮೂಲಕ ಗ್ರಾಮದಲ್ಲಿ ಆಧ್ಯಾತ್ಮಿಕ ಶಾಂತಿ ನೆಲೆಸುವಂತೆ ಮಾಡಲಾಗುತ್ತದೆ.

**ಜ್ಞಾನ ದಾಸೋಹ:** ಪ್ರಖ್ಯಾತ ಸ್ವಾಮೀಜಿಗಳಿಂದ ಪ್ರವಚನ ಹಾಗೂ ಕೀರ್ತನೆಗಳು ನಡೆಯುತ್ತವೆ.

**ನಿರಂತರ ಭಜನೆ:** ಶ್ರೀ ಮಹಾದೇವ ಭಜನೆ ಮಂಡಳಿ ವತಿಯಿಂದ ಮಹಾದೇವರ ಹೆಸರಲ್ಲಿ ಶಿವ ಭಜನೆ ಕಾರ್ಯಕ್ರಮ ಸುತ್ತ ಮುತ್ತಲಿನ ಹಳ್ಳಿಗಲ್ಲಿ ಪ್ರಖ್ಯಾತಿ ಹೊಂದಿದೆ.

**ಸಮಾಜಿಕ ಸೇವೆ:** ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಾಗೂ ನಿರಂತರ ಅನ್ನದಾಸೋಹದ ಮೂಲಕ ಭಕ್ತರ ಸೇವೆ ಮಾಡಲಾಗುತ್ತದೆ.

**ನಾಟಕ ಮತ್ತು ಕಲೆ:** ರಾಜ್ಯ ಮಟ್ಟದ ಪ್ರಶಸ್ತಿ ವಿಜೇತ ಇಲ್ಲಿನ ಕಲಾತಂಡವು ದೇವರುಗಳ ರೂಪ ಧರಿಸಿ ನಡೆಸಿಕೊಡುವ ನಾಟಕ ಮತ್ತು ಕೋಲಾಟವು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತದೆ.

**ಜಾತ್ರೆಯ ಹೈಲೈಟ್: ಶಿವ-ಪಾರ್ವತಿ ಕಲ್ಯಾಣೋತ್ಸವ** ಬಾರ್ಶಿ ಹಬ್ಬದ ಕೊನೆಯ ದಿನದಂದು ನಡೆಯುವ ಶಿವ-ಪಾರ್ವತಿಯರ ವಿವಾಹ ಮಹೋತ್ಸವ ಜಾತ್ರೆಯ ಪ್ರಮುಖ ಆಕರ್ಷಣೆ. ಲೋಕಕಲ್ಯಾಣದ ಸಂಕೇತವಾಗಿ ನಡೆಯುವ ಈ ವಿವಾಹವನ್ನು ವೀಕ್ಷಿಸಲು ಸಾವಿರಾರು ಭಕ್ತರು ಸಾಕ್ಷಿಯಾಗುತ್ತಾರೆ. ಈ ಸಂದರ್ಭದಲ್ಲಿ ಊರಿನ ಎಲ್ಲ ಜನತೆ ಜಾತಿ-ಮತ ಭೇದ ಮರೆತು ಒಂದಾಗುವುದು ಸಮಾಜಕ್ಕೆ ಸೌಹಾರ್ದತೆಯ ಸಂದೇಶ ಸಾರುತ್ತದೆ

"ಆಧುನಿಕತೆಯ ಅಬ್ಬರದಲ್ಲಿ ಮರೆಯಾಗುತ್ತಿರುವ ಸನಾತನ ಸಂಸ್ಕೃತಿಯನ್ನು ಉಳಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಲು ಇಂತಹ ಜಾತ್ರೆಗಳು ಮತ್ತು ಸಪ್ತಾಹಗಳು ಅತ್ಯಗತ್ಯ."

ಗ್ರಾಮದ ಆರಾಧ್ಯ ದೈವ ಮಹಾದೇವನ ದರ್ಶನ ಪಡೆದು ಪುನೀತರಾಗಲು ಸುತ್ತಮುತ್ತಲಿನ ಜಿಲ್ಲೆಗಳಿಂದಲೂ ಭಕ್ತಸಾಗರವೇ ಹರಿದುಬರುತ್ತಿದ್ದು, ಮುಧೋಳ ಗ್ರಾಮವು ಹಬ್ಬದ ಕಳೆಯನ್ನು ತುಂಬಿಕೊಂಡಿದೆ.

ಇಂತಹ ಅದ್ಭುತ ಕಾರ್ಯಕ್ರಮ ಮಹಾದೇವ ಮಂದಿರ ಆಡಳಿತ ಮಂಡಳಿಯವರು ಸತತ ಪರಿಶ್ರಮ ಮತ್ತು ಗ್ರಾಮದ ಸರ್ವ ಭಕ್ತರ ತನು, ಮನ, ಧನ ದಿಂದ ಅವರ ಸಹಕಾರ ದಿಂದ ಇಂತಹ ಅದ್ಭುತ ಕಾರ್ಯಕ್ರಮ ಸಾಕಾರಗೊಂಡಿದು. ಇದು ಒಂದು ಕೇವಲ ಜಾತ್ರೆಗೆ ಸೀಮಿತವಾಗದೆ ಹಲವು ಆಚರಣೆಗೆ ಸಾಕ್ಷಿಯಾಗಿದೆ.




Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)